ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY

Scan For Digital Colourful
Hampi Times E-paper
www.hampitimes.com
epaper.hampitimes.com
CALL US : 9448633038
Email us Your Advertisement Content to : hampitimes@gmail.com

ಸಂಪುಟ:01	ಸಂಚಿಕೆ:244	ನೋಂದಣಿ ನಂ.:KARKAN27911	ವಿಜಯನಗರ	22.02.2024	ಗುರುವಾರ	ಪುಟ:04	ಬೆಲೆ:2
Volume:01	Issue:244	Reg.No:KARKAN27911	VIJAYANAGARA	22.02.2024	Thursday	Page:04	Rs:2

ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಶೋಭಾಕೃತ

22–02–2024 – ಗುರುವಾರ

ತಿಥಿ	: ತ್ರಯೋದಶಿ
ಪಕ್ಷ	: ಶುಕ್ಲ
ನಕ್ಷತ್ರ	: ಪುಷ್ಯ
ಯೋಗ	: ಸೌಭಾಗ್ಯ
ಕರಣ	: ತೈತುಲ
ಕರಣ	: ಗರಜ
ಸೂರ್ಯೋದಯ	: 06.56.03
ಸೂರ್ಯಾಸ್ತ	: 18:25:11
ರಾಹು	: 14:07–15:33
ಯಮಘಂಡ	: 06:56–08:22
ಗುಳಿಕ	: 09:48–11:14

ತುಂಗಭದ್ರಾ ನೀರಿನ ಮಟ್ಟ



ಬುಧವಾರ: 21–02–2024

ಗರಿಷ್ಠ ಮಟ್ಟ	1633 ಅಡಿ
ಇಂದಿನ ಮಟ್ಟ	1587.62 ಅಡಿ
ಒಳ ಹರಿವು	00 ಕ್ಯುಸೆಕ್
ಹೊರ ಹರಿವು	586 ಕ್ಯುಸೆಕ್
ಇಂದಿನ ಸಾಮರ್ಥ್ಯ	9.158 ಟಿಎಂಸಿ
ಗರಿಷ್ಠ ಸಾಮರ್ಥ್ಯ	105.788 ಟಿಎಂಸಿ

ಕಳೆದ ವರ್ಷ ಇದೇ ದಿನ

ಗರಿಷ್ಠ ಮಟ್ಟ	1633 ಅಡಿ
ಇಂದಿನ ಮಟ್ಟ	1608.77 ಅಡಿ
ಒಳ ಹರಿವು	00 ಕ್ಯುಸೆಕ್
ಹೊರ ಹರಿವು	9323 ಕ್ಯುಸೆಕ್
ಸಾಮರ್ಥ್ಯ	35.216 ಟಿಎಂಸಿ

ಇಂಗ್ಲೀಷ್-ಹಿಂದಿ ಒತ್ತಡಕ್ಕೆ ಸೊರಗಿದ ಕನ್ನಡ

ಪ್ರಾಚಾರ್ಯ ಡಾ.ಬಿ.ಸಿ.ದಾದಾಪೀರ್ ನವಿಲೆಹಾಳ್ ಅಭಿಮತ । ಅನಕ್ಷರಸ್ಥರಲ್ಲಿರುವಷ್ಟು ಭಾಷಾ ಸಂಪತ್ತು, ವಿದ್ಯಾವಂತರಲ್ಲಿ ಕಾಣ್ತಿಲ್ಲ

ಭಾಷೆ ಕೇವಲ ಸಂವಹನವಲ್ಲ, ಆಲೋಚನಾ ಪ್ರಕ್ರಿಯೆ । ಧರ್ಮವನ್ನು ಮೀರಿದ್ದು ಭಾಷೆ । ಹೆಚ್ಚು ಹೆಚ್ಚು ಚಿಂತನೆಗಳು ನಡೆಯಲಿ

■ ಹಂಪಿ ಟೈಮ್ಸ್ ಹೊಸಪೇಟೆ

ಭಾಷೆ ಪ್ರತಿಯೊಂದು ಜನಸಮುದಾಯದ ಭಾಗ. ಭಾಷೆ ಕೇವಲ ಸಂವಹನ ವಿಧಾನವಲ್ಲ, ಅದೊಂದು ಆಲೋಚನಾ ಪ್ರಕ್ರಿಯೆ. ಭಾಷೆಯ ಹಿಂದೆ ಮಾನವೀಯ ಸಂಬಂಧಗಳ ಒಂದು ನೈತಿಕ ಹೊಣೆಗಾರಿಕೆಯಿದೆ ಎಂದು ದಾವಣಗೆರೆಯ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಪ್ರಾಚಾರ್ಯರಾದ ಡಾ.ಬಿ.ಸಿ.ದಾದಾಪೀರ್ ನವಿಲೆಹಾಳ್ ಅವರು ಅಭಿಪ್ರಾಯಪಟ್ಟರು.

ಕನ್ನಡ ವಿಶ್ವವಿದ್ಯಾಲಯದ ಕೇಶಿರಾಜ ಕಟ್ಟಡ, ಕನ್ನಡ ಭಾಷಾಧ್ಯಯನ ವಿಭಾಗದಲ್ಲಿ ಬುಧವಾರ ಲೋಕ ತಾಯ್ನುಡಿ ದಿನಾಚರಣೆಯ ಪ್ರಯುಕ್ತ ಕೆ.ಎಲ್.ಇ ದತ್ತಿನಿಧಿ ಆಶ್ರಯದಲ್ಲಿ ಕನ್ನಡ ಮತ್ತು ಸಮುದಾಯಗಳು ಎಂಬ ವಿಷಯದ ಕುರಿತು ಏರ್ಪಡಿಸಿದ್ದ ವಿಶೇಷ ಉಪನ್ಯಾಸದಲ್ಲಿ ಮಾತನಾಡಿದರು.

ಕಳೆದ 25 ವರ್ಷಗಳಲ್ಲಿ ಇಂಗ್ಲೀಷ್ ಮತ್ತು ಹಿಂದಿ ಭಾಷೆಗಳು ಕನ್ನಡವನ್ನು ಸೊರಗಿಸುವ ಕೆಲಸ ಮಾಡಿವೆ. ಇಂದು ಅಚ್ಚ ಕನ್ನಡದ ಬಳಕೆ ಕಡಿಮೆಯಾಗಿದ್ದು, ಹಿಂದಿ, ಇಂಗ್ಲೀಷ್ ಮಿಶ್ರಿತ ಕನ್ನಡದ ಬಳಕೆಯನ್ನು ಕಾಣುತ್ತೇವೆ. ಇದಕ್ಕೆ ಸಾಮಾಜಿಕ ಜಾಲತಾಣಗಳ

ಕೊಡುಗೆಯು ಹೇರಳವಾಗಿದೆ. 20 ವರ್ಷಗಳ ಹಿಂದಿನ ಕಾದಂಬರಿಗಳಿಗೂ ಈಗಿನ ಕಾದಂಬರಿಗಳಲ್ಲಿ ಬಳಕೆಯಾಗುತ್ತಿರುವ ಭಾಷೆಗೂ ಬಹಳಷ್ಟು ಭಿನ್ನತೆಯಿದೆ. ಇದರಿಂದಾಗಿ ನೆಲಮೂಲದ ಕಲೆ, ಸಂಸ್ಕೃತಿ, ಜನಪದ, ಪರಂಪರೆಗಳು ಕಣ್ಮರೆಯಾಗುತ್ತಿವೆ. ಕೃಷಿ, ಗುಡಿಕೈಗಾರಿಕೆ, ಪರಿಸರ ಮುಂತಾದ ವಿಷಯಗಳ ಕುರಿತು ಅನಕ್ಷರಸ್ಥರಲ್ಲಿರುವಷ್ಟು ಭಾಷಾ ಸಂಪತ್ತು, ವಿದ್ಯಾವಂತರಾದ ನಮ್ಮಲ್ಲಿ ಇಲ್ಲ. ಆದ್ದರಿಂದ ಕನ್ನಡ ಭಾಷೆಯ ಮೂಲ ಸ್ವರೂಪದ ಓದು ಮತ್ತು ಅರ್ಥೈಸುವಿಕೆಯಲ್ಲಿ ಯುವ ಸಮೂಹ ತೊಡಗಿಸಿಕೊಳ್ಳುವುದು ತುಂಬಾ ಮುಖ್ಯ ಎಂದು ತಿಳಿಸಿದರು.

ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಅಧ್ಯಕ್ಷತೆವಹಿಸಿ ಮಾತನಾಡಿ, ಮಾತೃ ಭಾಷೆಯಲ್ಲಿನ ಪರಿಣಿತಿಯು ನಮ್ಮ ಆತ್ಮಸ್ಥೈರ್ಯವನ್ನು ಹೆಚ್ಚಿಸುತ್ತದೆ. ಭಾಷೆ ಎನ್ನವುದು ನಮ್ಮ ಅಭಿಪ್ರಾಯಗಳನ್ನು ಮತ್ತೊಬ್ಬರಿಗೆ ತಿಳಿಸಲು ಇರುವ ಸಾಧನ. ಮಾತೃ ಭಾಷೆಯ ಹೊರತಾಗಿ ಬೇರೆ ಭಾಷೆಗಳನ್ನು ವ್ಯವಹಾರಿಕ ಬದುಕಿನಲ್ಲಿ ಬಳಸುವುದು ಸಹಜ. ತಾಯ್ನುಡಿ ಮೇಲೆ ಪ್ರವಾಹಿಸುವಲ್ಲಿ ಹೆಚ್ಚು ಕಡಿಮೆಯಾದರೂ, ಅಂತರ್ಗಾಮಿಯಾಗಿ ಸದಾ ಹರಿಯುತ್ತಿರುತ್ತದೆ. ಎಲ್ಲ ರೀತಿಯ ಕನ್ನಡವು ಕನ್ನಡಿಗರ ಅಸ್ಮಿತೆಯನ್ನು ಸೂಚಿಸುತ್ತದೆ. ಧರ್ಮವನ್ನು ಮೀರಿದ್ದು ಭಾಷೆ. ಇದರ ಬಗ್ಗೆ ಹೆಚ್ಚು ಹೆಚ್ಚು ಚಿಂತನೆಗಳು ನಡೆಯಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಕನ್ನಡ ಭಾಷಾಧ್ಯಯನ ವಿಭಾಗದ ಡಾ.ಪಿ. ಮಹಾದೇವಯ್ಯ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿಭಾಗದ ಪ್ರಾಧ್ಯಾಪಕರಾದ ಡಾ. ಡಿ. ಪಾಂಡುರಂಗ ಬಾಬು, ಡಾ. ಅಶೋಕಕುಮಾರ ರಂಜೇರೆ ಮತ್ತು ವಿವಿಧ ನಿಕಾಯಗಳ ಡೀನರು, ಮುಖ್ಯಸ್ಥರು, ಅಧ್ಯಾಪಕರು, ಬೋಧಕೇತರ ಸಿಬ್ಬಂದಿಗಳು, ಸಂಶೋಧನಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಫೆ.23 ರಂದು ತುರ್ತು ನೀರಾವರಿ ಸಲಹಾ ಸಮಿತಿ ಸಭೆ

■ ಹಂಪಿ ಟೈಮ್ಸ್ ಬಳ್ಳಾರಿ

ಬೇಸಿಗೆಯಲ್ಲಿ ಕುಡಿಯುವ ನೀರನ್ನು ಸಮರ್ಪಕವಾಗಿ ಒದಗಿಸುವ ನಿಟ್ಟಿನಲ್ಲಿ ತುಂಗಾಭದ್ರಾ ಯೋಜನೆಯ ಮತ್ತು ವಿಜಯನಗರ ಕಾಲುವೆಗಳ 121 ನೇ ತುರ್ತು ನೀರಾವರಿ ಸಲಹಾ ಸಮಿತಿ ಸಭೆಯನ್ನು ಫೆ.23 ರಂದು ಸಂಜೆ 04 ಗಂಟೆಗೆ ಬೆಂಗಳೂರಿನ ವಿಧಾನಸೌಧದ 3 ನೇ ಮಹಡಿಯ ಕೊಠಡಿ ಸಂಖ್ಯೆ.334 ರ ಸಮ್ಮೇಳನ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ ಮತ್ತು ನೀರಾವರಿ ಸಲಹಾ ಸಮಿತಿಯ ಅಧ್ಯಕ್ಷರೂ ಆದ ಶಿವರಾಜ ಎಸ್.ತಂಗಡಗಿ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ತುಂಗಾಭದ್ರಾ ಯೋಜನೆ ಮತ್ತು ವಿಜಯನಗರ ಕಾಲುವೆಗಳ ನೀರಾವರಿ ಸಲಹಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ನಂಜುಂಡಸ್ವಾಮಿ ಮತ್ತು ರೈತಪ್ರಜ್ಞೆ

ರಹಮತ್ ತರೀಕೆರೆ
ಲೇಖಕರು, ಚಿಂತಕರು


ನಂಜುಂಡಸ್ವಾಮಿ

ಕನ್ನಡದಲ್ಲಿ ಚಿಂತನ ಪರಂಪರೆ ಕುವೆಂಪು ಕಾರಂತ ಡಿವಿಜಿ ಶಂಬಾ ಅವರಿಂದ ಹಿಡಿದು ಈಚಿನ ಚಿಂತಕರವರೆಗೆ ನಿಡಿದಾಗಿ ಹರಹಿಕೊಂಡಿದೆ. ಹೆಚ್ಚಿನ ಚಿಂತಕರು ಸಾಹಿತ್ಯ ಸಂಸ್ಕೃತಿ ನೆಲೆಯಿಂದ ಚಿಂತನೆ ಮಾಡುವವರು. ಕರ್ನಾಟಕದ ರಾಜಕಾರಣ ಆರ್ಥಿಕತೆಯ ನೆಲೆಯಿಂದ ಚಿಂತನೆ ಮಾಡುವವರು ಕಡಿಮೆ. ಸಮಾಜವಿಜ್ಞಾನದ ವೃತ್ತಿಪರ ಪ್ರಾಧ್ಯಾಪಕರು ಕನ್ನಡದಲ್ಲಿ ಬರೆಯುವುದು ಕಡಿಮೆ. ಬರೆದರೆ ಅದರಲ್ಲಿ ಸಮುದಾಯ ಬದುಕಿನ ರಾಜಕಾರಣ ಇರುವುದಿಲ್ಲ. ರಾಜಕೀಯ ಅರ್ಥ ಶಾಸ್ತ್ರಗಳನ್ನು ತರಗತಿಯ ಗಿಳಿಪಾಠವನ್ನಾಗಿ ಮಾಡಿರುವ, ಬೌದ್ಧಿಕತೆಯನ್ನು ಪ್ರಭುತ್ವ ಪರವಾದ ಸೇವೆಯನ್ನಾಗಿ ಮಾಡಿರುವ ಅಕೆಡೆಮಿಕ್ ವಿದ್ವತ್ತಿಗೆ ಒಂದು ಬಗೆಯಮಂಕು ಬಡಿದಿರುತ್ತದೆ. ಈ ಹಿನ್ನೆಲೆಯಲ್ಲಿ ರೈತನಾಯಕ ಎಂ.ಡಿ. ನಂಜುಂಡಸ್ವಾಮಿ ಅವರ ರಾಜಕೀಯ ಚಿಂತನೆಗಳನ್ನು ಇಟ್ಟು ನೋಡಿದರೆ, ಆಕ್ಟಿವಿಸಮಿನಿಂದ ಚಿಂತನೆಗೆ ಬರುವ ಮೊನಚು ಮತ್ತು ಸ್ಪಷ್ಟತೆ ತಿಳಿಯುತ್ತದೆ. ವಿವರ ಪುಟ 02

ರಾಜ್ಯ ಮಟ್ಟದ ಬೃಹತ್ ಉದ್ಯೋಗ ಮೇಳ: ವಿಕಲಚೇತನರು ಭಾಗವಹಿಸಲು ಅವಕಾಶ

■ ಹಂಪಿ ಟೈಮ್ಸ್ ಬಳ್ಳಾರಿ

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ ವತಿಯಿಂದ ಫೆ.26 ಮತ್ತು 27 ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ರಾಜ್ಯ ಮಟ್ಟದ ಬೃಹತ್ ಉದ್ಯೋಗ ಮೇಳವನ್ನು ಆಯೋಜಿಸಲಾಗಿದ್ದು, ಉದ್ಯೋಗವನ್ನು ಬಯಸುವಂತಹ ಬಳ್ಳಾರಿ ಜಿಲ್ಲೆಯ ವಿಕಲಚೇತನರು ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಹೆಚ್. ಗೋವಿಂದಪ್ಪ ಅವರು ತಿಳಿಸಿದ್ದಾರೆ.

ಆಸಕ್ತರು https://udyoga.skillconnet.kaushalkar.com/ ಲಿಂಕ್‌ಗೆ ಭೇಟಿ ನೀಡಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಂಡು ರಾಜ್ಯ ಮಟ್ಟದ ಬೃಹತ್ ಉದ್ಯೋಗ ಮೇಳದ ಸದುಪಯೋಗ ಪಡೆದುಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಬಳ್ಳಾರಿ ಜಿಲ್ಲೆಯ ಎಂಆರ್‌ಡಬ್ಲ್ಯೂಗಳ ದೂರವಾಣಿ ಸಂಖ್ಯೆ: ಬಳ್ಳಾರಿ, ಕಂಪ್ಲಿ–8880875620, ಕುರುಗೋಡು–9538000887, ಸಿರುಗುಪ್ಪ–9743509698, ಸಂಡೂರು–9632052270 ಅಥವಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ದೂ.08392–267886 ಗೆ ಸಂಪರ್ಸಬಹುದು.

ಸದೃಢ ಆರೋಗ್ಯಕ್ಕೆ ಕ್ರೀಡೆಗಳು ಸಹಕಾರಿ

ಸಮಾಜ ಸೇವಕ ಕುರಿಶಿವಮೂರ್ತಿ ಹೇಳಿಕೆ । ಕ್ರಿಕೇಟ್ ಟೂರ್ನಮೆಂಟ್‌ಗೆ ಚಾಲನೆ

■ ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ

ಟಿ.ವಿ, ಮೊಬೈಲ್, ವಾಟ್ಸ್‌ಪ್ ಗೀಳಿನಿಂದಾಗಿ ಯುವಕರು, ಮಕ್ಕಳಲ್ಲಿ ಸೋಮಾರಿತನ ಹೆಚ್ಚುತ್ತಿದ್ದು, ಮಕ್ಕಳ ಮಾನಸಿಕ ಹಾಗೂ ಸದೃಢ ಆರೋಗ್ಯಕ್ಕಾಗಿ ಕ್ರೀಡೆಗಳತ್ತ ಸೆಳೆಯುವ ಅಗತ್ಯವಿದೆ ಎಂದು ಸಮಾಜ ಸೇವಕ ಕುರಿಶಿವಮೂರ್ತಿ ಹೇಳೀದರು.

ಡಣಾಪುರ ಬಳಿ, ಕರ್ನಾಟಕ ರಕ್ಷಣಾ ವೇದಿಕೆಯಿಂದ ಹುಲಿಗೆಮ್ಮದೇವಿ ಜಾತ್ರೆ ಪ್ರಯುಕ್ತ ಹಮ್ಮಿಕೊಂಡ, ಕ್ರಿಕೇಟ್ ಟೂರ್ನ್ ಮೆಂಟ್‌ಗೆ ಚಾಲನೆ ನೀಡಿ ಮಾತನಾಡಿದರು, ಮೊಬೈಲ್ ಗೀಳು ಮನುಷ್ಯರನ್ನು ಮೂಲೆಗುಂಪು ಮಾಡುತ್ತದೆ. ಯುವಕರು ಹೆಚ್ಚು ಹೆಚ್ಚು ಹೆಚ್ಚು ಕ್ರೀಡೆಗಳಲ್ಲಿ ಭಾಗವಹಿಸಿದಾಗ ಉತ್ತಮ ಸಮಾಜ ನಿರ್ಮಾಣಕ್ಕೂ ಸಹಕಾರಿಯಾಗಲಿದೆ ಎಂದರು.

ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಎಸ್.ಕೃಷ್ಣನಾಯ್ಕ ಮಾತನಾಡಿ,ಸದೃಢ ಆರೋಗ್ಯ ಮತ್ತು ಸದೃಢ ದೇಹ ಹೊಂದಲು ಕ್ರೀಡಾ ಹವ್ಯಾಸ ಬೆಳೆಸಿಕೊಳ್ಳಬೇಕು. ಯೋಗ ಮತ್ತು ಕ್ರೀಡೆಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಕ್ರೀಡಾ ಚಟುವಟಿಕೆಗಳಲ್ಲಿ ನಿತ್ಯ ಪಾಲ್ಗೊಳ್ಳುವುದರಿಂದ ಉತ್ತಮ ಆರೋಗ್ಯ ಹೊಂದಲು ಅನುಕೂಲವಾಗುತ್ತದೆ.

ಜೀವನದಲ್ಲಿ ಶಿಸ್ತು, ಬದ್ಧತೆ ರೂಢಿಸುವಲ್ಲಿ ಕ್ರೀಡೆಗಳು ಯಶಸ್ವಿಯಾಗಿವೆ. ಯುವಕರು ಕ್ರೀಡೆಗಳಲ್ಲಿ ಬದುಕು ರೂಪಿಸಿಕೊಳ್ಳುವ ಮಟ್ಟಿಗೆ ಸಾಧನೆ ತೋರಬಹುದಾಗಿದ್ದು, ಈ ಕ್ಷೇತ್ರದಲ್ಲಿ ದೇಶದ ಅತ್ಯುನ್ನತ ಗೌರವಕ್ಕೆ ಪಾತ್ರರಾಗಿರವ ಕ್ರೀಡಾಳುಗಳ ಆದರ್ಶದ ಕುರಿತು ಪ್ರತಿಯೊಬ್ಬರಲ್ಲಿ ಅರಿವು ಮೂಡಿಸುವುದು ಎಲ್ಲರ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪಟ್ಟಣದ ಪಿ.ಎಸ್.ಐ. ಮೌನೇಶ್ ರಾಥೋಡ್, ಡಣಾಪುರ ಗ್ರಾ.ಪಂ.ಅಧ್ಯಕ್ಷ ಹೆಚ್. ಮಲ್ಲೇಶ್, ಗ್ರಾ.ಪಂ.ಸದಸ್ಯ ಹೆಚ್.ಬಿ.ಕೃಷ್ಣಗುಂಡಾ, ಬಿ.ಎಂ.ಎಂ.ಅಧಿಕಾರಿ ಗಿರೀಶ್, ಕ.ರಾ.ರೈ.ಸಂಘದ ಜಿಲ್ಲಾಧ್ಯಕ್ಷ ಸಿ.ಎ.ಗಾಳೆಪ್ಪ, ಸ್ಥಳಿಯ ಮುಖಂಡರಾದ ಕುರಿಪಂಪಾಪತಿ, ಹಳ್ಳಿನಿಂಗಪ್ಪ, ಪಕ್ಕೀರಪ್ಪ, ಕ.ರ.ವೇ. ಜಿಲ್ಲಾಧ್ಯಕ್ಷ ಎಂ.ಭರತ್ ಸೇರಿದಂತೆ ಇತರರಿದ್ದರು.

ಗುತ್ತಿಗೆ ಆಧಾರದ ವಾಹನ ಚಾಲಕರ ಹುದ್ದೆಯ ನೇಮಕಾತಿ

■ ಹಂಪಿ ಟೈಮ್ಸ್ ಕೊಪ್ಪಳ

ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ, ಬೆಂಗಳೂರು ಇವರ ಅಡಿಯಲ್ಲಿ ಕೊಪ್ಪಳ ಜಿಲ್ಲಾ ಏಡ್ಸ್ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಘಟಕದ ಸಂಚಾರಿ ಐಸಿಟಿಸಿ ವಾಹನಕ್ಕೆ ಒಂದು ವಾಹನ ಚಾಲಕರ ಹುದ್ದೆಯನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ನೇರ ಸಂದರ್ಶನವನ್ನು ಫೆಬ್ರವರಿ 29ರಂದು ಬೆಳಿಗ್ಗೆ 10 ಗಂಟೆಗೆ ನಗರದ ಹಳೇ ಜಿಲ್ಲಾಸ್ಪತ್ರೆ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ವೇತನ, ಅರ್ಜಿ ನಮೂನೆ ಹಾಗೂ ಅವಶ್ಯಕ ದಾಖಲೆಗಳ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಏಡ್ಸ್ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಘಟಕ, ಕೊಪ್ಪಳ ಜಿಲ್ಲಾ ಕ್ಷಯರೋಗ ನಿರ್ಮೂಲನ ಕಚೇರಿ, ಹಳೆಯ ಜಿಲ್ಲಾ ಆಸ್ಪತ್ರೆ ಆವರಣ, ಕೊಪ್ಪಳ ದೂ.ಸಂಖ್ಯೆ: 9449843232/ 9449846981 ಗೆ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
HAMPI TIMES
Leading Kannada Daily
Lowest Ad Rates Save Upto 50%
Discount Packages
BOOK YOUR ADS
MATRIMONIAL
PROPERTY
RECRUITMENT
BUSINESS
VEHICLES
SERVICES
LOST OF CERTIFICATE
LOSS OF DOCUMENTS
CHANGE OF NAME
COURT NOTICE
PUBLIC NOTICE
WEDDING WISHES
TO RENT
TENDERS
WANTED
ANNOUNCEMENT
RETAIL
OBITUARY
MARRIAGE BUREAU
EDUCATION
COMPUTERS
REMEMBRANCE
ASTROLOGY
TRAVEL
STRATS FROM
Rs.500/-
94486 33038

ವಚನ ಅರಿವು

ಅಡಿಯಾಳಲ್ಲ

ಜಂಗಮವೆಂದರೆ ನಡೆನುಡಿ ಸಿದ್ಧಿಯಾಗಿರಬೇಕು.
ಮೂರು ಮಲಕ್ಕೆ ಸಿಕ್ಕದೆ,
ಆರರಡಿಗೆ ಅಡಿಯಾಗದೆ,
ಆ ಗುಣ ತೋರುವುದಕ್ಕೆ ಮೊದಲೆ
ಮೀರಿ ಇರಬೇಕೆಂದನಂಬಿಗ ಚೌಡಯ್ಯ.
– ಅಂಬಿಗರ ಚೌಡಯ್ಯ

ಜಂಗಮರು ಬಸವಾದಿ ಶರಣರು ಹೇಳಿದ ಜೀವನ ವಿಧಾನ, ತಿಳುವಳಿಕೆ, ತತ್ವಬೋಧನೆ ಕಾಯಕದಲ್ಲಿ ತೊಡಗಿರುತ್ತಾರೆ. ಶರಣತತ್ವವನ್ನು ಯಾರು ನಿಷ್ಠೆಯಿಂದ ಜನರಿಗೆ ಮುಟ್ಟಿಸಲು ಪ್ರಸಾರಮಾಡುತ್ತಾರೋ ಅವರೆ ಜಂಗಮರು. ಜಂಗಮನಿಗೆ ಯಾವುದೇ ಜಾತಿಯಿಲ್ಲ. ಯಾವುದೇ ಜಾತಿಯಿಂದ ಜಂಗಮನೆನಿಸಿಕೊಳ್ಳುವುದಿಲ್ಲ. ಊರು, ಕೇರಿ, ಮನೆ ಮನೆಗಳಿಗೆ ಹೋಗಿ ಅರಿವು, ಆಚಾರ, ಅನುಭಾವವನ್ನು ತಿಳಿಸಿ, ತತ್ವಬೋಧನೆ ಕಾಯಕದಲ್ಲಿ ನಿರತನಾದ ಜಂಗಮನಿಗೆ ಶರಣರು ಬೋಧಿಸಿದ ನಡೆ, ನುಡಿ ಶುದ್ಧತೆ, ಆಚಾರ, ವ್ಯಕ್ತಿತ್ವ ಇರಬೇಕು. ಅವನು ಅರಿವು ಪಡೆದು ಆಚಾರವಂತನಾಗಿ ನಿಜತತ್ವವನ್ನು ನುಡಿದು ಅದರಂತೆ ನಡೆದು ಬದುಕುತ್ತಿರಬೇಕು. ಹೆಣ್ಣು, ಹೊನ್ನು, ಮಣ್ಣುಗಳಿಗೆ ಆಸೆಮಾಡಿ ಮನವನ್ನು ಮಾಯೆಗೆ ಒಳಗಾಗಿಸಬಾರದು. ತನು, ಮನ, ಭಾವ ಶುದ್ಧವಾಗಿ ಪ್ರಾಮಾಣಿಕವಾಗಿರಬೇಕು. ತನ್ನ ಹೊಟ್ಟೆ ಹೊರೆಯಲಿಕ್ಕಾಗಿ ಯಾರ ಹಂಗಿಗೂ ಬೀಳಬಾರದು. ಯಾರ ಕಾಲಡಿಯ ಆಳಿನಂತೆ ವರ್ತಿಸಬಾರದು. ಇಡೀ ಜೀವನವನ್ನು ಲಿಂಗಕ್ಕೆ, ಭಕ್ತಿಗೆ, ಸಮಾಜಕ್ಕೆ, ಶರಣತತ್ವಕ್ಕೆ ಬದ್ಧನಾಗಿ ನಿಷ್ಠೆಯಿಂದ ಬದುಕಬೇಕು.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

ರಾಜ್ಯದ ಪಾಲಿನ ನಮ್ಮ ಹಣ ವಾಪಾಸ್ ಕೊಡಿಸಿ, ನಿಮಗೆ ನೂರು ಕೋಟಿ ನಮಸ್ಕಾರ ಹಾಕ್ತೀನಿ : ಸಿ.ಎಂ.ಸಿದ್ದರಾಮಯ್ಯ ಸವಾಲು

ಬೆಂಗಳೂರು: ನೂತನ ಪಾರ್ಲಿಮೆಂಟಿನ ಉದ್ಘಾಟನೆಗೆ ಗೌರವಾನ್ವಿತ ರಾಷ್ಟ್ರಪತಿ ದ್ರೌಪದಿ ಮರ್ಮು ಅವರನ್ನು ಆಹ್ವಾನಿಸದೇ ಇದ್ದದ್ದು ರಾಷ್ಟ್ರಪತಿಗಳಿಗೆ , ರಾಷ್ಟ್ರಪತಿ ಹುದ್ದೆಗೆ ಮಾಡಿದ ಅವಮಾನ ಅಲ್ಲವೇ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಕ್ರೋಶ ವ್ಯಕ್ತಪಡಿಸಿದರು.

ವಿಧಾನ ಪರಿಷತ್ ನಲ್ಲಿ ರಾಜ್ಯಪಾಲರ ಭಾಷಣದ ಮೇಲೆ ನಡೆದ ಚರ್ಚೆಗೆ ಉತ್ತರ ನೀಡುವಾಗ ಈ ರೀತಿ ಪ್ರಶ್ನಿಸಿದರು. ಕೇಂದ್ರದಿಂದ ರಾಜ್ಯಕ್ಕೆ ಬರಬೇಕಾದ ರಾಜ್ಯದ ಪಾಲಿನ ನಮ್ಮ ಹಣ ವಾಪಾಸ್ ಕೊಡಿಸಿ: ನಿಮಗೆ ನೂರು ಕೋಟಿ ನಮಸ್ಕಾರ ಹಾಕ್ತೀನಿ ಎಂದು ಸಿ.ಎಂ.ಸಿದ್ದರಾಮಯ್ಯ ಅವರು ಬಿಜೆಪಿ ಸದಸ್ಯರಿಗೆ ಸವಾಲು ಹಾಕಿದರು.

ಈ ವೇಳೆ ಪರಿಷತ್ ವಿರೋಧ ಪಕ್ಷದ ನಾಯಕರಾದ ಕೋಟಾ ಶ್ರೀನಿವಾಸ್ ಪೂಜಾರಿಯವರು ಮಧ್ಯ ಪ್ರವೇಶಿಸಿ, ನಿಮ್ಮ ಕೋಟಿ ನಮಸ್ಕಾರ ನಮಗೆ ಬೇಡ. ಆದರೆ ಪ್ರಧಾನಿ ಮತ್ತು ರಾಷ್ಟ್ರಪತಿಯವರನ್ನು ಏಕವಚನದಲ್ಲಿ ಕರೆಯುವುದನ್ನು ನಿಲ್ಲಿಸಿ ಎನ್ನುವ ಮೂಲಕ ವಿಷಯಾಂತರ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿಗಳು ನಾನು ಗೌರವಾನ್ವಿತ ರಾಷ್ಟ್ರಪತಿಗಳಿಗೆ ಬಿಜೆಪಿ ಮಾಡಿದ ಅವಮಾನವನ್ನು ಪ್ರಸ್ತಾಪಿಸುವಾಗ ಬಾಯಿತಪ್ಪಿ ಏಕ ವಚನ ಬಳಸಿದೆ. ಇದಕ್ಕೆ ತಕ್ಷಣವೇ ವಿಷಾದ ಕೂಡ ವ್ಯಕ್ತಪಡಿಸಿದ್ದೇನೆ.

ಆದರೆ, ನೂತನ ಪಾರ್ಲಿಮೆಂಟಿನ ಉದ್ಘಾಟನೆಗೆ ಗೌರವಾನ್ವಿತ ರಾಷ್ಟ್ರಪತಿ ದ್ರೌಪದಿ ಮರ್ಮು ಅವರನ್ನು ಆಹ್ವಾನಿಸದೇ ಇದ್ದದ್ದು ರಾಷ್ಟ್ರಪತಿಗಳಿಗೆ , ರಾಷ್ಟ್ರಪತಿ ಹುದ್ದೆಗೆ ಮಾಡಿದ ಅವಮಾನ ಅಲ್ಲವೇ? ರಾಷ್ಟ್ರಪತಿಗಳಿಗೆ ನೀವು ಮಾಡಿದ ಅವಮಾನ ಸರಿಯೇ ಎಂದು ಪ್ರಶ್ನಿಸಿದರು.

ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು: **ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 9448633038

ನಂಜುಂಡಸ್ವಾಮಿ ಮತ್ತು ರೈತಪ್ರಜ್ಞೆ



ಕನ್ನಡದಲ್ಲಿ ಚಿಂತನ ಪರಂಪರೆ ಕುವೆಂಪು ಕಾರಂತ ಡಿವಿಜಿ ಶಂಬಾ ಅವರಿಂದ ಹಿಡಿದು ಈಚಿನ ಚಿಂತಕರವರೆಗೆ ನಿಡಿದಾಗಿ ಹರಹಿಕೊಂಡಿದೆ. ಹೆಚ್ಚಿನ ಚಿಂತಕರು ಸಾಹಿತ್ಯ ಸಂಸ್ಕೃತಿ ನೆಲೆಯಿಂದ ಚಿಂತನೆ ಮಾಡುವವರು. ಕರ್ನಾಟಕದ ರಾಜಕಾರಣ ಆರ್ಥಿಕತೆಯ ನೆಲೆಯಿಂದ ಚಿಂತನೆ ಮಾಡುವವರು ಕಡಿಮೆ. ಸಮಾಜವಿಜ್ಞಾನದ ವೃತ್ತಿಪರ ಪ್ರಾಧ್ಯಾಪಕರು ಕನ್ನಡದಲ್ಲಿ ಬರೆಯುವುದು ಕಡಿಮೆ. ಬರೆದರೆ ಅದರಲ್ಲಿ ಸಮುದಾಯ ಬದುಕಿನ ರಾಜಕಾರಣ ಇರುವುದಿಲ್ಲ. ರಾಜಕೀಯ ಅರ್ಥಶಾಸ್ತ್ರಗಳನ್ನು ತರಗತಿಯ ಗಿಳಿಪಾಠವನ್ನಾಗಿ ಮಾಡಿರುವ, ಬೌದ್ಧಿಕತೆಯನ್ನು ಪ್ರಭುತ್ವ ಪರವಾದ ಸೇವೆಯನ್ನಾಗಿ ಮಾಡಿರುವ ಅಕೆಡೆಮಿಕ್ ವಿದ್ವತ್ತಿಗೆ ಒಂದು ಬಗೆಯಮಂಕು ಬಡಿದಿರುತ್ತದೆ. ಈ ಹಿನ್ನೆಲೆಯಲ್ಲಿ ರೈತನಾಯಕ ಎಂ.ಡಿ. ನಂಜುಂಡಸ್ವಾಮಿ ಅವರ ರಾಜಕೀಯ ಚಿಂತನೆಗಳನ್ನು ಇಟ್ಟು ನೋಡಿದರೆ, ಆಕ್ಟಿವಿಸಮಿನಿಂದ ಚಿಂತನೆಗೆ ಬರುವ ಮೊನಚು ಮತ್ತು ಸ್ಪಷ್ಟತೆ ತಿಳಿಯುತ್ತದೆ. ಅಧ್ಯಯನದಿಂದ ಚಿಂತನೆಗೆ ಸೈದ್ಧಾಂತಿಕ ಪಾಂಡಿತ್ಯ ಒದಗುತ್ತದೆ. ಚಳುವಳಿಗಳ ನಡುವಿಂದ ಹುಟ್ಟುವ ಚಿಂತನೆಗೆ ಸೈದ್ಧಾಂತಿಕ ಸ್ಪಷ್ಟತೆಯ ಜತೆಗೆ ಆನ್ವಯಿಕ ಗುಣವಿರುತ್ತದೆ. ನಂಜುಂಡಸ್ವಾಮಿ ಅವರ ಚಿಂತನೆಯಲ್ಲಿ ಅತ್ಯಂತ ಸ್ಥಳೀಯವಾದುದನ್ನು ಅಂತಾರಾಷ್ಟ್ರೀಯ ರಾಜಕೀಯ ತಿಳಿವಳಿಕೆಯಲ್ಲಿಟ್ಟು ವಿಶ್ಲೇಷಿಸುವ ಕುಶಲತೆಯಿದೆ. ಅದು ರೈತ ಸಮುದಾಯ, ಅಂತರಾಷ್ಟ್ರೀಯ ರಾಜಕಾರಣ ಹಾಗೂ ಸಾಹಿತ್ಯ ಸಂಸ್ಕೃತಿಗಳ ಮಿಲನವ. ನಂಜುಂಡಸ್ವಾಮಿ ಚಳುವಳಿಗಾರರೂ ರಾಜಕೀಯ ಚಿಂತಕರೂ, ಸಕ್ರಿಯ ರಾಕಾರಣಿಯೂ ಆಗಿದ್ದವರು. ಚಳುವಳಿಗಳು ಹಾಗೂ ಪ್ರಭುತ್ವ, ಜಾಗತೀಕರಣ ಹಾಗೂ ಭಾರತದಂತಹ ದೇಶಗಳ ಆರ್ಥಿಕತೆ ವಿಶ್ಲೇಷಣೆ, ಎನ್‌ಜಿಓ ಹಾಗೂ ಸಾಮ್ರಾಜ್ಯಶಾಹಿ ಸಂಬಂಧಗಳು, ಬೆಳೆಪದ್ಧತಿ, ಆಹಾರ ಸಂಸ್ಕೃತಿ ಹಾಗೂ ಬೀಜೋತ್ಪಾದನೆ ಮಾಡುವ ಬಹುರಾಷ್ಟ್ರೀಯ ಕಂಪನಿಗಳ ಅಂತರ್ಸಂಬಂಧ, ಪ್ರಭುತ್ವಪೋಷಕ ಅರ್ಥಶಾಸ್ತ್ರಜ್ಞರ ಸ್ವಭಾವ, ಇತ್ಯಾದಿ ಕುರಿತಂತೆ ಅವರ ತಿಳಿವಳಿಕೆ ವಿಶಿಷ್ಟವಾಗಿದೆ. ಅವರು ತೀರಿಕೊಳ್ಳುವ ಕೆಲವು ತಿಂಗಳುಗಳ ಮುನ್ನ, ಹೊಸಪೇಟೆಯ ರೈತಸಮಾವೇಶಕ್ಕೆ ಬಂದಿದ್ದಾಗ ಮಾಡಲಾದ ಸುದೀರ್ಘ ಸಂದರ್ಶನದ ಒಂದು ಸಣ್ಣಭಾಗವನ್ನು ಇಲ್ಲಿ ಕೊಡಲಾಗಿದೆ.

ನೀವು ರೈತಾಪಿ ಚಿಂತನೆಗೆ ಹೊರಳಲು ಏನು ಕಾರಣ?

ನನಗೂ ತೇಜಸ್ವಿಗೂ ಪರಿಚಯ ಸುಮಾರು 1960ನೇ ಇಸ್ವಿಯಿಂದ. ಅಷ್ಟೊತ್ತಿಗಾಗಲೇ ನಾನು ಎಲ್‌ಎಲ್‌ಎಂ ಮುಗಿಸಿದ್ದೆ, ಕರ್ನಾಟಕ ಯೂನಿವರ್ಸಿಟಿಯಿಂದ. ಮುಗಿಸಿ ಜರ್ಮನಿ ಹೋಗಿಬಿಟ್ಟೆ 4 ವರ್ಷ. ಅಲ್ಲಿಂದ ವಾಪಸು ಬರೋವಾಗಲೇನೆ ರೈತ ಸಂಘಟನೆ ಮಾಡಬೇಕು ವ್ಯವಸಾಯನೇ ಮಾಡಬೇಕು ಅಂತಲೇ ತೀರ್ಮಾನ ಮಾಡಿಕೊಂಡು ಬಂದಿದ್ದು. ಅಷ್ಟರಲ್ಲಿ ತೇಜಸ್ವಿಯವರು ವ್ಯವಸಾಯ ಶುರು ಮಾಡಿದ್ದರು. ಮತ್ತೆ ಸುಂದರೇಶ್, ನಮ್ಮ ರೈತಸಂಘದ ಸಂಸ್ಥಾಪಕ ಕಾರ್ಯದರ್ಶಿಯಾಗಿದ್ದರಲ್ಲ ಅವರೂ ವ್ಯವಸಾಯ ಶುರುಮಾಡಿದ್ದರು. 1965ರಲ್ಲಿ ನಾನೂ ವ್ಯವಸಾಯ ಶುರುಮಾಡಿದೆ.

ನೀವು ಮೂಲತಃ ಕಾನೂನಿನ ವಿದ್ಯಾರ್ಥಿ. ರೈತಪರ ಚಿಂತನೆಗೆ ಜರ್ಮನಿಯಲ್ಲಿ ಹೇಗೆ ಪ್ರೇರಣೆ ಸಿಕ್ತು?

ಕಾನೂನಲ್ಲಿ ನಾನು ಇಂಟರ್ ನ್ಯಾಶನಲ್ ಲಾ ಅಂಡ್ ಇಂಟರ್ ನ್ಯಾಶನಲ್ ರಿಲೇಶನ್ಸ್ ಅಧ್ಯಯನ ಮಾಡದೋನು. ಅದರಲ್ಲಿ ಸಾಮ್ರಾಜ್ಯಶಾಹಿ ಮಾಡ್ತಾ ಇರೊ ಜಾಗತಿಕ ಶೋಷಣೆ, ಇವೆಲ್ಲ ಸ್ಪಷ್ಟವಾಗಿ ಗೊತ್ತಾಗಲಿಕ್ಕೆ ಶುರುವಾಯಿತು. ಆಮೇಲೆ ಸ್ವಾತಂತ್ರ್ಯ ಬಂದ ಮೇಲೂ ಯಾವ ರೀತಿ ಕಲೋನಿಯಲಿಜಂ ಮುಂದುವರಿಸೋದರಲ್ಲಿ ಬಿಳೀ ರಾಷ್ಟ್ರಗಳೂ ಯಶಸ್ವಿಯಾಗಿದಾವೆ ಅನ್ನೋದು ಗೊತ್ತಾಯಿತು.

ಜರ್ಮನಿ ಕೂಡ ಒಂದು ಬಿಳೀರಾಷ್ಟ್ರವೆ. ಅಲ್ಲಿನ ಪಠ್ಯಕ್ರಮದಲ್ಲಿ ಇವೆಲ್ಲ ಇದ್ದವಾ?

ಯುಸೀ, ಇಂಟರ್ ನ್ಯಾಶನಲ್ ಲಾದಲ್ಲಿ ಜರ್ಮನಿ ಪಠ್ಯಕ್ರಮ ಅಂತ ಏನಿರಲ್ಲ. ಎಲ್ಲಾ ದೇಶದಲ್ಲೂ ಒಂದೇ ಪಠ್ಯಕ್ರಮ ಇರಬೇಕಾಗುತ್ತೆ. ಜತೆಗೆ ನನ್ನ ಸುತ್ತ ಇದ್ದ ವಾತಾವರಣ ಕೂಡ ಇದಕ್ಕೆ ಕಾರಣವಾಯಿತು. ನಾನು ಬ್ರಾಹ್ಮಣೇತರ ಚಳುವಳಿ ನಡೀತಿದ್ದಂತಹ ವಾತಾವರಣದಲ್ಲಿ ಹುಟ್ಟಿದೆ. ಆನಂತರ ಸ್ವಾತಂತ್ರ್ಯ ಬಂದ ಮೇಲೆ, ಕಿಸಾನ್ ಮಜದೂರ್ ಪ್ರಜಾಪಾರ್ಟಿ ಸದಸ್ಯರು ನಮ್ಮ ತಂದೆ. ಅನಂತರ ಪ್ರಜಾ ಸೋಶಲಿಸ್ಟ್ ಪಾರ್ಟಿ ಆಯಿತು. ಆಗಲೂ ನಮ್ಮ ತಂದೆ ಆ ಪಾರ್ಟಿ ಸದಸ್ಯರು. ಹಾಗಾಗಿ ಸಮಾಜವಾದಿ ವಾತಾವರಣದಲ್ಲೆ ಬೆಳೆದೆ.

ಕನ್ನಡದ ಲೇಖಕರು ಬುದ್ಧಿಜೀವಿಗಳು ಸಮಾಜ ಹಾಗೂ ವ್ಯವಸ್ಥೆಯ ಜತೆ ಇರಿಸಿಕೊಂಡಿರೋ ಸಂಬಂಧವನ್ನು ಹ್ಯಾಗೆ ವಿಶ್ಲೇಷಣೆ ಮಾಡತೀರಿ?

ಕರ್ನಾಟಕ ಲೇಖಕರುಗಳಲ್ಲಿ ಒಂದು ಅನ್‌ಡಿಸೈರಬಲ್ ಆದಂಥ ಒಂದು ನಡತೆ ಕಾಣಿಸಿಕೊಳ್ಳೋದಿಕ್ಕೆ ಶುರುವಾಗಿದೆ. ಚಳುವಳಿಗಳಿಗೂ ಅವರಿಗೂ ನಡುವೆ ಕಂದರ ಪ್ರಾರಂಭವಾಗಿದೆ. ಇದು ಕೆಲವು ಚಳುವಳಿಗಳು ಕ್ಷೀಣ ಆಗಲಿಕ್ಕೂ ಕಾರಣ ಆಗಿದೆ. ಇದಕ್ಕೆ ಮುಖ್ಯ ಕಾರಣ, ವ್ಯವಸ್ಥೆ ಜೊತೆ ಹೊಂದಾಣಿಕೆ. ದಲಿತ ಚಳುವಳಿ ನಾಶವಾಗೋದಕ್ಕೆ ಕಾರಣ ವ್ಯವಸ್ಥೆ ಜೊತೆ ಹೊಂದಾಣಿಕೆ. ಪವರ್ ಪಾಲಿಟಿಕ್ಸ್ ಬಗ್ಗೆ, ರಾಜಕೀಯ ಪಕ್ಷಗಳ ಬಗ್ಗೆ, ಸ್ಪಷ್ಟವಾದಂಥ ಒಂದು ನಿಲುವು ತಾಳದೇ ಇರೋದು ನಮ್ಮ ಬುದ್ಧಿಜೀವಿಗಳು ಮಾಡ್ತಾ ಇರೋ ತಪ್ಪು. ಬೇರೆ ದೇಶದ ಬುದ್ಧಿಜೀವಿಗಳಿಗೆ ಹೋಲಿಸಿದರೆ, ಜನಾಂದೋಳನಗಳಲ್ಲಿ ಭಾಗವಹಿಸದೇ ಇರೋದು ಕಾಣ್ತಿದೆ. ಒಂದು ಸಾರಿ ಎಚ್. ನರಸಿಂಹಯ್ಯನವರು ಬಹಳ ದೊಡ್ಡ ಭಾಷಣ ಮಾಡಿದರು ಜಾಗತೀಕರಣದ ವಿರುದ್ಧ. ನರಸಿಂಹಯ್ಯ ಗಾಂಧಿವಾದಿ ಅಂತಲೇ ಬರೀತಾರೆ ಇವತ್ತಿಗೂ. ಆನಂತರ ನಾನು ಮಾತಾಡೋ ದಿತ್ತು. ಅವರ ಎದುರಿಗೇನೇ ಹೇಳಿದೆ : 'ಯಾಕೆ ನಮ್ಮ ದೇಶದ ಬುದ್ಧಿಜೀವಿಗಳಿಗೂ, ಬೇರೆ ದೇಶದ ಬುದ್ಧಿಜೀವಿಗಳಿಗೂ ವ್ಯತ್ಯಾಸ ಬರುತ್ತೆ? ಬರ್ಟಂಡ್ ರಸೆಲ್ ಸಾಯೋಕೆ ಮುಂಚೆ ಇಂಗ್ಲೆಂಡಿನ ರಸ್ತೆಗಳಲ್ಲಿ ಚಳುವಳಿ ಮಾಡಿದರು, ವಿಯಟ್ನಾಂ ವಾರ್ ವಿರುದ್ಧ. ನಮ್ಮ ದೇಶದ ಬುದ್ಧಿಜೀವಿಗಳಿಗೆ ಏನಾಗಿದೆ?' ನರಸಿಂಹಯ್ಯನವರು ಇಷ್ಟೊಂದು ಮಾತಾಡುತ್ತಾರೆ. ಅವರು ಜಾಗತೀಕರಣದ ವಿರುದ್ಧ ನಡೀತಾ ಇರೋ ಚಳುವಳಿಗಳಲ್ಲಿ ಭಾಗವಹಿಸಬೇಕು; ಅದಾದ ಮೇಲೆ ಅವರು ಮತ್ತೆ ಮಾತಾಡಿದರು. 'ಇಲ್ಲ ನನ್ನಿಂದ ಭಾಗವಹಿಸೋಕೆ ಆಗಲ್ಲ.' ಸೀ, ಈ ಧೋರಣೆಯಿದ್ದಾಗ ಕಂದರ ತನ್ನಿಂದ ತಾನೇ ಸೃಷ್ಟಿಯಾಗುತ್ತೆ.

ಕರ್ನಾಟಕದಲ್ಲಿ 80ರ ದಶಕದಲ್ಲಿ ಹುಟ್ಟಿದ, ಅನೇಕ ಚಳುವಳಿಗಳು ಒಡೆದುಹೋಗಿವೆ. ಇದಕ್ಕೆ ಕಾರಣ ಈ ಚಳುವಳಿಯ ತಾತ್ವಿಕ ಸ್ವರೂಪದಲ್ಲಿ ಇದೆಯೋ ಅಥವಾ ದೇಶದ ರಾಜಕೀಯ ಪರಿಸರದಲ್ಲಿದೆಯೊ?

ನೀವು ಹೇಳಿದ ಕೆಲವು ಚಳುವಳಿ ಡಿಸಿಂಟಿಗ್ರೇಟ್ ಆಗಿರಬಹುದು. ರೈತ ಚಳುವಳಿ ಮಾತ್ರ ಆಗಿಲ್ಲ. ನಾಲ್ಕು ಸಾರಿ ಅದಕ್ಕೆ ಸ್ವಲ್ಪ ತಲೆನೋವುಗಳು ಬಂದರೂನೂ ಡಿಸಿಂಟಿಗ್ರೇಟಂತೂ ಆಗಿಲ್ಲ. ಸಣ್ಣ ಸಣ್ಣ ಗುಂಪುಗಳು ತಮ್ಮ ಸ್ವಾರ್ಥ ಸಾಧನೆಗಾಗಿ ಆಚೆ ಹೋಗಿವೆ. ಇದು ಪ್ರತಿ ವರ್ಷಕ್ಕೊಮ್ಮೆ ಅದೂ ಚುನಾವಣೆಗೆ ಪೂರ್ವಭಾವಿಯಾಗಿ ಇದಾಗುತ್ತೆ. ಇನ್ನೂ ಎರಡು ವರ್ಷಕ್ಕೆ ಮುಂದಿನ ಚುನಾವಣೆ ವೇಳೆಗೆ, ಐದನೇ ಗುಂಪು ಆಚೆ ಹೋಗಬಹುದು. ಕೆಲವು ವ್ಯಕ್ತಿಗಳು ಆಚೆ ಹೋಗಬಹುದು. ಆದರೆ ರೈತ ಚಳುವಳೀನ ಗಟ್ಟಿಯಾಗಿ ಇಟ್ಟಿರೋದು ಒಳಗೆ ಇರೋವಂಥ ಕಾರ್ಯಕರ್ತರು. ಅವರಿಗೆ ಇರೋವಂಥ ವೈಚಾರಿಕ ಸ್ಪಷ್ಟತೆ, ಸಂಘಟನಾತ್ಮಕ ನಿಲುವು, ನಮ್ಮ ಇವತ್ತಿನ ರಾಜಕೀಯ ಪಕ್ಷಗಳ ಬಗ್ಗೆ ಇರೋವಂಥ ಸ್ಪಷ್ಟ ನಿಲುವು, ಬೇರೆ ನೀವ್ಹೇಳಿದಂಥ ಚಳುವಳಿಗಳಿಗೆ ಇಲ್ಲ. ಬಂಡಾಯ ಸಾಹಿತಿಗಳಿಗೆ ರಾಜಕೀಯ ಪಕ್ಷಗಳ ಬಗ್ಗೆ ಸ್ಪಷ್ಟವಾದ ನಿಲುವು ಇದೆಯಾ? ಒಂದು ಸಂಘಟನೆಯಾಗಿ ದಲಿತ ಚಳುವಳಿಯಲ್ಲಿ ರಾಜಕೀಯ ಪಕ್ಷಗಳ ಬಗ್ಗೆ ಸ್ಪಷ್ಟ ನಿಲುವು ಇದೆಯಾ?

ಪವರ್ ಪಾಲಿಟಿಕ್ಸಿನ ಬಗ್ಗೆ ರಾಜಕೀಯ ಪ್ರಜ್ಞೆ ಬೆಳೆಸಿಕೊಳ್ಳೋದು ಬೇರೆ. ಪವರ್ ಪಾಲಿಟಿಕ್ಸಿನಲ್ಲಿ ನೇರವಾಗಿ ದುಮುಕುವುದು ಬೇರೆ. ನೀವು ಚುನಾವಣೆಗೆ ನಿಂತಿದ್ದಿರಿ. ಗೆದ್ದಿರಿ, ಸೋತಿರಿ. ಚಳುವಳಿಗಳು ಜನಾಭಿಪ್ರಾಯ ರೂಪಿಸುವ ಕೆಲಸವನ್ನು ಮಾಡ್ತಾ ಒತ್ತಡದ ಗುಂಪುಗಳಾಗಿ ಪ್ರಭುತ್ವಗಳನ್ನು ನಿಯಂತ್ರಿಸಬಲ್ಲ ಜನಾಂದೋಲನಗಳಾಗಿ ಇರುವುದು ಈ ಹೊತ್ತಲ್ಲಿ ಹೆಚ್ಚು ಅಗತ್ಯ ಅನಿಸೋದಿಲ್ಲವಾ?

ನೋ. ನಾಟ್ ನೆಸೆಸರೀಲಿ. ಯಾವುದೇ ಒಂದು ಆಂದೋಲನ ಆದರೂನೂ ಜನಾಭಿಪ್ರಾಯ ರೂಪಿಸೋವಂಥ ಒಂದು ಚಳುವಳಿ ನಡೀತಾನೆ ಇರಬೇಕು. ಅದರ ಜೊತೆಗೆ ಅಧಿಕಾರ ಗ್ರಹಣಾನೂ ಒಂದು ಮುಖ್ಯ ಭಾಗ. ಅಧಿಕಾರ ಗ್ರಹಣ ಇಲ್ಲದೆ ಯಾವುದೇ ಚಳುವಳಿ ತನ್ನ ಆಶೋತ್ತರಗಳನ್ನು ಸಂಪೂರ್ಣವಾಗಿ ಈಡೇರಿಸಿಕೊಳ್ಳೋದು ಅಸಾಧ್ಯ. ಆದರೆ ಅಧಿಕಾರ ಗ್ರಹಣ ಯಾವ ರೀತಿ ಮಾಡಬೇಕು ಇದು ಮುಖ್ಯ ಪ್ರಶ್ನೆ. ಕನ್ನಡ ಚಳುವಳಿಯವರಿಗೆ ನಾನು ಇದೇ ಮಾತು ಹೇಳಿದ್ದೆ: 'ಕಾಲಕಾಲಕ್ಕೆ ನೀವು ಯಾವುದೇ ಪಕ್ಷದ ಸರಕಾರ ಇದ್ದರೂನೂ ಹೊಂದಾಣಿಕೆ ಮಾಡಿಕೊಳ್ಳೋದು, ಆ ಸರಕಾರದಲ್ಲಿ ಕೆಲವು ಹುದ್ದೆಗಳಿಗೆ ಪ್ರಯತ್ನ ಮಾಡೋದು, ಇದನ್ನು ಎಷ್ಟು ಕಾಲ ಮಾಡ್ತೀರಿ? ಇದನ್ನ ಬಿಟ್ಟು ನೀವೇ ಒಂದು ರಾಜಕೀಯ ಶಕ್ತಿಯಾಗಿ ಉಳಿದಿದ್ದರೆ ಕನ್ನಡದ ಸ್ಥಿತಿ ಬೇರೇನೆ ಆಗ್ತಿತ್ತು.

ಜನಪರ ಚಳುವಳಿಗಳು ಒಂದು ರಾಜಕೀಯ ಪರ್ಯಾಯದತ್ತ ಹೋಗಬೇಕಾದರೆ ಮಾಡಬೇಕಾದ ಮೊದಲ ಕೆಲಸ ಯಾವುದು?

ಮೊದಲು ವೈಚಾರಿಕ ಸ್ಪಷ್ಟತೆ, ವೈಚಾರಿಕ ಹೊಂದಾಣಿಕೆ ಆಗಬೇಕು. ಅನಂತರ ಅದರ ಆಧಾರದ ಮೇಲೆ ಕಾರ್ಯಕ್ರಮಗಳನ್ನ ರೂಪಿಸಬೇಕು. ಎರಡು ಮೂರು

ಕವಿ ಮನಸು

ವಿಶ್ವ ಮಾತೃಭಾಷೆ ದಿನ.

ಪರಭಾಷೆಯನ್ನು ಕಲಿತು
ಅರಿವನ್ನು ಹೆಚ್ಚಿಸಿಕೊಳ್ಳೋಣ.
ಮಾತೃ ಭಾಷೆಯನ್ನು ಎಲ್ಲರಿಗೂ ಕಲಿಸುವ
ಮೂಲಕ ಅಭಿಮಾನ ಮೆರೆಯೋಣ.
ತಾಯಿನಾಡು, ಭಾಷೆ, ಸಂಸ್ಕೃತಿ ಬಗೆಗಿನ
ಉದಾಸೀನ
ಆಗದಿರಲಿ ಪರಂಪರೆಯ ಇತಿಹಾಸದ
ಅಳಿವಿಗೆ ಕಾರಣ.

– ಮಂಜುಶ್ರೀ ಮುರಳೀಧರ್
ತೋರಣಗಲ್ಲು

ಮಾತೃ ಭಾಷೆ

ಜಗದಲ್ಲಿರಬಹುದು ನೂರಾರು ಭಾಷೆ
ನುಡಿಯಲು ಶ್ರೇಷ್ಟವು ಮಾತೃ ಭಾಷೆ
ಕರ್ನಾಟಕದಲ್ಲಿರುವುದು ಕನ್ನಡ ಭಾಷೆ
ಗಂಧದ ಗುಡಿಯ ಶ್ರೀಗಂಧದ ಭಾಷೆ

ಗಂಧದ ಕಂಪು ಎಲ್ಲೆಡೆ ಸೂಸುತಿರಲಿ
ನಮ್ಮ ಕನ್ನಡವೆಂಬುದು ಕಂಪು ಕಸ್ತೂರಿ
ಎಲ್ಲೆಡೆ ಪಸರಿಸಿ ಊದೋಣ ತುತ್ತೂರಿ
ಕನ್ನಡದ ಕೀರ್ತಿ ಪತಾಕೆ ಎತ್ತರಕ್ಕೇರುತಿರಲಿ

ಕವಿ ಪುಂಗವ ವಚನಕಾರರು ಹುಟ್ಟಿದರಿಲ್ಲಿ
ಕನ್ನಡದ ಘಮಲನ್ನು ಜಗದಗಲ
ಪಸರಿಸಲು
ಸವಿಗನ್ನಡ ನುಡಿಯಿಂದ ಅಂಧಕಾರ
ತೊಲಗಿಸಿ
ಜ್ಞಾನದ ದೀಪವ ಹಚ್ಚಿದರು ಜನರ
ಮನದೊಳಗೆ

ಅವರು ಹಚ್ಚಿದ ಕನ್ನಡ ದೀಪವಿದು
ಅನುದಿನವೂ
ನಂದಾದೀಪದಂತೆ ಪ್ರಜ್ವಲಿಸುತಿರಲಿ
ಹೃದಯದಲಿ
ಮಾತೃಭಾಷೆಯ ತೈಲ ಸುರಿದು
ಕನ್ನಡಿಗರಾದ ನಾವು
ಜೋಪಾನ ಮಾಡೋಣ ಕನ್ನಡಾಂಬೆಯ
ದೀಪವನ್ನು!

– ಪ್ರಜ್ಞಾ ರವೀಶ್, ಕುಳಮರ್ವ

ಆಕ್ಷೇಪಣೆ ಸಲ್ಲಿಸಲು ಅವಕಾಶ

ಹಂಪಿ ಟೈಮ್ಸ್ ಬಳ್ಳಾರಿ

ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆಯಡಿ 2022–23 ನೇ ಸಾಲಿನ ಮುಂಗಾರು ಹಾಗೂ ಹಿಂಗಾರು ಹಂಗಾಮಿನ ಬೆಳೆ ವಿಮೆ ಪ್ರಸ್ತಾವನೆಗಳನ್ನು ಬೆಳೆಸಮೀಕ್ಷೆಯೊಂದಿಗೆಹೊಂದಾಣಿಕೆಯಾಗದೆ ವಿಮಾ ಸಂಸ್ಥೆಯವರಿಂದ ತಿರಸ್ಕೃತಗೊಂಡ ಪ್ರಸ್ತಾವನೆಗಳಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶ ನೀಡಲಾಗಿದೆ.

ಬಳ್ಳಾರಿ, ಕುರುಗೋಡು ತಾಲ್ಲೂಕಿನಲ್ಲಿ ಮುಂಗಾರು ಹಂಗಾಮಿನಲ್ಲಿ 04 ಪ್ರಸ್ತಾವನೆಗಳು ಹಾಗೂ ಹಿಂಗಾರು ಹಂಗಾಮಿನಲ್ಲಿ 11 ಪ್ರಸ್ತಾವನೆಗಳು ಆಕ್ಷೇಪಣೆಗೊಂಡಿರುತ್ತವೆ.

ರೈತರು ಆಕ್ಷೇಪಣೆಗಳಿದ್ದಲ್ಲಿ ಮಾರ್ಚ್ 02 ರೊಳಗೆ ಸಲ್ಲಿಸಬಹುದಾಗಿದೆ. ನಿಗದಿತ ಸಮಯದಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸದಿದ್ದಲ್ಲಿ ಅಂತಹ ಪ್ರಸ್ತಾವನೆಗಳನ್ನು ಅಸಿಂಧು ಎಂದು ಪರಿಗಣಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ರೈತ ಸಂಪರ್ಕ ಕೇಂದ್ರ, ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಸಂಪರ್ಕಿಸಬಹುದು ಎಂದು ಬಳ್ಳಾರಿ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕ ದಯಾನಂದ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

ನೀಲಿ ನೆರಳಲ್ಲಿ ಭಾರತ! ನಿಸ್ಸಾರದತ್ತ ಬದುಕು!!

ಮುಂದುವರೆದ ಭಾಗ...

ವಯಸ್ಸಿನ ಮಿತಿ ಏನು?

ಮಕ್ಕಳು ನೋಡಲೇ ಬಾರದು, ಮಕ್ಕಳನ್ನ ಒಳಗೊಂಡಂತ ನೀಲಿ ಚಿತ್ರವನ್ನು ನೋಡುವುದು, ಇತರರು ಮತ್ತು ಮಕ್ಕಳು ನೀಲಿ ಚಿತ್ರವನ್ನು ನೋಡುವಂತೆ ಮಾಡುವುದು ಶಿಕ್ಷಾರ್ಹಾ ಅಪರಾಧ.

ನೀಲಿ ಚಿತ್ರ ನೋಡುವುದರಿಂದ ವಯಕ್ತಿಕ, ಕುಟುಂಬದ ಮತ್ತು ಸಮಾಜದ ಮೇಲೆ ಉಂಟಾಗುವ ಪರಿಣಾಮವೇನು?

ನಾನು ಅತಿಯಾಗಿ ಕಳವಳ ಪಟ್ಟಿದ್ದು ಮತ್ತು ನಾನು ಬಹುಮುಖ್ಯವಾಗಿ ಹೇಳಬೇಕೆಂದಿದ್ದು ಈ ವಿಷಯವನ್ನೆ, ಏಕೆಂದರೆ ಇತ್ತೀಚಿಗಿ ನಾನು ನನ್ನ ಮನೆಯಲ್ಲಿ ದೃಷ್ಯ ಮಾಧ್ಯಮವನ್ನು ನೋಡುತ್ತಿದ್ದಾಗ ಈ ವಿಷಯ ಕುರಿತು ವಿಷಯವೊಂದು ಬಿತ್ತರವಾಗುತಿತ್ತು ತಕ್ಷಣ ನನ್ನ ಪಕ್ಕದಲ್ಲೇ ಕುಳಿತಿದ್ದ ಸುಮಾರು 13 ವರ್ಷದ ನನ್ನ ಅಣ್ಣನ ಮಗಳು ಅದೇನು ಅಂಕಲ್ ಭಾರತ ಜಗತ್ತಿನ ನಂ–1 ಎಂದು ತೋರಿಸುತಿದ್ದಾರೆ, ಯಾವುದರಲ್ಲಿ? ಏನಾದರು ಸಾದನೆ ಮಾಡಿದಿಯ, ಯಾರಾದರು ಮೆಡಲ್ ಗೆದ್ದುಬಿಟ್ಟರ? ಅಂತ ಕೇಳುತ್ತಾ ಹೋದ ಪ್ರಶ್ನೆಗೆ ಏನೆಂದು ಉತ್ತರಿಸಲಿ, ಏಕೆಂದರೆ ಆ ದೃಷ್ಯ ಮಾಧ್ಯಮದಲ್ಲಿ 2018 ರ ಒಂದು ವರದಿಯ ಪ್ರಕಾರ ನೀಲಿ ಚಿತ್ರ ವೀಕ್ಷಣೆಯಲ್ಲಿ ಜಗತ್ತಿನಲ್ಲಿಯೇ ಭಾರತ ನಂ–1!. 2017 ರಲ್ಲಿ ಮೂರನೆ ಸ್ಥಾನದಲ್ಲಿದ್ದ ಭಾರತ ಈಗ ನಂ–1! ಎಂದು ಬಿತ್ತರವಾಗುತಿತ್ತು. ಸ್ವಲ್ಪ ತಳಮಳ ಇರಸು–ಮುರುಸು ಅನಿಸಿದರು ಅವಳು ನನ್ನ ಮೇಲೆ ಇಟ್ಟಿರುವ ನಂಬಿಕೆ ಮತ್ತು ಅವಳ ಮುಗ್ದತೆ ಮೇಲೆ ನನಗಿದ್ದ ನಂಬಿಕೆಯಿಂದ ನನ್ನದೆ ಇತಿಮಿತಿಯಲ್ಲಿ ನನಗನಿಸಿದ ರೀತಿಯಲ್ಲಿ ಅವಳಿಗೆ ಅರ್ತವಾಗುವಂತೆ ನನ್ನದೆ ಶಿಕ್ಷಕ ತರಬೇತಿಯಲ್ಲಿ ಕಲಿತ ಕೆಲ ಅನುಭವಗಳನ್ನ ಆದರಸಿ ಪ್ರಕೃತಿಯಲ್ಲಿ ನಮ್ಮ ದಿನನಿತ್ಯದ ಜೀವನದಲ್ಲಿ ನಾನು ಮತ್ತು ನೀನು ನೋಡಿರುವಂತೆ ಕ್ರಿಮಿಕೀಟಗಳಿಂದಾದಿ, ಪಶು–ಪಕ್ಷಿಗಳು, ಪ್ರಾಣಿಗಳು ದನಕರುಗಳು, ಮನುಷ್ಯರು ಸೇರಿದಂತೆ ಕೆಲ ಜಾತಿಯ ಹೂವುಗಳಲ್ಲಿಯೂ ಗಂಡು ಮತ್ತು ಹೆಣ್ಣು ಲಿಂಗಿಗಳಿರುತ್ತವೆ, ಉದಾಹರಣೆಗೆ ನಿನ್ನಣ್ಣ ಇದ್ದಾನಲ್ಲ ಅವನು ಗಂಡು, ನೀನು ಹೆಣ್ಣು ಮಗಳಲ್ಲವೆ? ಹಾಗೆ "ಪ್ರಕೃತಿ ನಿಯಮದ ಪ್ರಕಾರ ಪ್ರತಿಯೊಂದು ಜೀವಿಯು ತನ್ನ ಜೀವಿತ ಅವದಿಯಲ್ಲಿ ಒಂದು ಬಾರಿ ಇಲ್ಲವೆ ಅನೇಕಬಾರಿ ತನ್ನದೆ ಹೋಲಿಕೆಯುಳ್ಳ ಮರಿಗಳಿಗೆ ಜನ್ಮ ನೀಡುತ್ತವೆ" ಇದನ್ನೆ ನಿಮ್ಮ ವಿಜ್ಞಾನ ಪಠ್ಯಪುಸ್ತಕದಲ್ಲಿ ಪ್ರಜನನ ಕ್ರಿಯೆ ಎನ್ನುತ್ತಾರೆ ಅಲ್ಲವೆ? ಹೀಗೆ ಪ್ರಜನನ ಕ್ರಿಯೆಯಿಂದ ಮಕ್ಕಳು ಉಂಟಾಗಲು ಗಂಡು ಮತ್ತು ಹೆಣ್ಣು ಲಿಂಗಿಗಳು ಒಂದನೊಂದು ಸೇರಬೇಕಾಗುತ್ತದೆ

ಇದನ್ನೆ ಲೈಂಗಿಕ ಕ್ರಿಯೆ ಎನ್ನುತ್ತಾರೆ ಇದರ ಕುರಿತು ಹೆಚ್ಚಿನ ಮಾಹಿತಿಯನ್ನ ಸಮಯ ಬಂದಾಗ ಅಂದರೆ ನಿನಗೆ ಮದುವೆಯ ವಯಸ್ಸು ಅಂದರೆ 18 ವರ್ಷದವಳಾದಾಗ ನಿನಗೆ ಅಮ್ಮ ಹೇಳಿ ಕೊಡುತ್ತಾಳೆ ಎಂದು ಹೇಳುತ್ತಾ ನನ್ನ ಮೇಲಿದ್ದ ಗುಡ್ಡದಂತಹ ಸಮಸ್ಯಯನ್ನ ಇಳಿಸಿಕೊಂಡ ನೀರಾಳದಲ್ಲಿ ರಿಮೊಟ್ ಗುಂಡಿಯನ್ನ ಬದಲಿಸಿದೆ!. ಸರಿ ಹಾಗದರೆ ಪಾಲಕರಾದ ನಾವು ಎಲ್ಲಿ ಎಡೆವುತ್ತಿದ್ದೇವೆ ಮಕ್ಕಳು ಕೇಳುವ ಸರಳ ಪ್ರಶ್ನೆಗೆ ಉತ್ತರಿಸಲು ತಡಕಾಡುತ್ತಿರುವಲ್ಲಿಯೆ? ಅಥವಾ ಮಕ್ಕಳನ್ನ ಗದರಿ ನಿನಗೆಲ್ಲ ಅದೇಕೆ ಎಂದು ಸಿಡಿಕಿ ಸುಮ್ಮನೆ ಓದಿಕೊ ಹೋಗು ಎನ್ನುವುದರಲ್ಲಿಯೇ? ಅಥವಾ ಮಕ್ಕಳು ಇಂತಹ ಪ್ರಶ್ನೆಗಳನ್ನ ಕೇಳುವ ಹಂತಕ್ಕೆ ತಂದು ನಿಲ್ಲಿಸಿದ ಸಮಾಜದ ಪ್ರಸ್ತುತ ಆಗುಹೋಗುಗಳಿಗೆ ಅನ್ನಬೇಕೆ? ನನ್ನಂತೆ ನನ್ನ ಕೆಲ ಪ್ರಜ್ಞಾವಂತ ಪಾಲಕರಲ್ಲಿ ಇದೇ ಪ್ರಶ್ನೆಯನ್ನ ಕೇಳಿದಾಗ ನನಗೆ ಮೂರ್ಚೆ ಹೊಗುವುದೊಂದೆ ಬಾಕಿ ಉಳಿದಿತ್ತು ಏಕೆಂದರೆ ಒಬ್ಬರು ಹೇಳಿದಂತೆ ಅರೆ.. ಬಿಡಿ ಸಾರ್, ಇದರಲ್ಲೇನು ವಿಶೇಷ ಎಲ್ಲರು ನೀಲಿ ಚಿತ್ರ ನೊಡುತಾರೆ, ನಾನು ನೊಡುತ್ತೇನೆ ಅದರಲ್ಲಿ ಅಂತಹ ತಪ್ಪೇನಿದೆ ಅದು ನಮ್ಮ ಹಕ್ಕು ಅನ್ನುವ ಆಧುನಿಕ ಪ್ರಜ್ಞಾವಂತ ನಾಗರಿಕರಿಗೆ, ಪ್ರಿತಿಯ ಪಾಲಕರಿಗೆ ಈ ವರದಿಯ ಇನ್ನು ಕೆಲವು ಕಟು ಸತ್ಯಾಂಶಗಳನ್ನ ನಿಮ್ಮ ಮುಂದೆ ಇಡುವುದಾದರೆ

* ಪ್ರಪಂಚದ ಒಟ್ಟು ಅಂತರ್ಜಾಲ ದತ್ತಾಂಶ ಡೌನ್ ಲೋಡ್ ನಲ್ಲಿ ಶೇ 35% ಪ್ರಮಾಣ ನೀಲಿ ಚಿತ್ರದ್ದು ಆಗಿರುತ್ತದೆ!
* ಪ್ರತಿ ದಿನದ ಎಲ್ಲ ಸರ್ಚ ಇಂಜನ್ ಗಳ ಒಟ್ಟು ಹುಡುಕಾಟದಲ್ಲಿ ಶೇ 25 ರಷ್ಟು ನೀಲಿ ಚಿತ್ರಗಳ ಸಂಬಂದಿತ ಹುಡುಕಾಟಕ್ಕೆ ಸಂಬಂದಿಸಿರುತ್ತದೆ (86 ಮಿಲಿಯನ್ ಹುಡುಕುವಿಕೆ ಪ್ರತಿ ದಿನಕ್ಕೆ).
* ಆಶ್ಚರ್ಯ ಮತ್ತು ಆತಂಕದ ವಿಷಯವೆಂದರೆ ಮೂರನೆ ಒಂದು ಭಾಗದಷ್ಟು (1/3) ಹುಡುಗಿಯರು ನೀಲಿ ಚಿತ್ರದ ಗೀಳಿಗೆ ಬಿದ್ದಿದ್ದಾರೆ.
* ಅದರಲ್ಲು ಸುಮಾರು 1160000 ದಷ್ಟು ಹುಡುಕುವಿಕೆ ಕೇವಲ ಮಕ್ಕಳ ನೀಲಿ ಚಿತ್ರದ ಕುರಿತಾಗಿರುತ್ತ್ವ
* ಹೆಚ್ಚಿನ ಗಮನ ಕೊಡಬೇಕಾಗಿರುವ ವಿಷಯವೆಂದರೆ ಶೇ 34 ರಷ್ಟು ಅಂತರ್ಜಾಲ ಉಪಯೊಗಿಸುವವರು ತಮಗರಿವಿಲ್ಲದಂತೆ ನೀಲಿ ಚಿತ್ರ ಸಂಬಂದಿತ ಚಿತ್ರಗಳು,ದತ್ತಾಂಶ ಹಾಗು ಮೇಲ್ ಗಳು,ಮತ್ತು ಪೋಪ್ ಅಪ್ಸ ಗಳಿಗೆ ತೆರುದು ಕೊಳ್ಳುತ್ತಾರೆ.

ನೀಲಿ ಚಿತ್ರ ಮತ್ತು ನೀಲಿ ದತ್ತಾಂಶ ಕುರಿತ ನಿರ್ಭಂದ ಸಂಬಂದಿತ ಕಾನೋನು ಇತಿ ಮಿತಿಗಳೇನು?

ಸಂಭವನೀಯ ಮಾಧ್ಯಮ ವಿಷಯಗಳಿಂದ ಮತ್ತು ಅದರ ದುಷ್ಪಪರಿನಾಮಗಳಿಂದ ಮಕ್ಕಳು ಮತ್ತು ಯುವಜನತೆಯನ್ನ ರಕ್ಷಣೆ ಮಾಡುಲು CBFC(Central Board of Film Chamber) ನಂತಹ ಕೆಲವು ಮಂಡಳಿಗಳು ಹುಟ್ಟಿಕೊಂಡವು ಅವುಗಳು ಕೆಲವು ಪ್ರಮುಖ ಉದ್ದೇಶಗಳನ್ನ ಗಮನದಲ್ಲಿಟ್ಟುಕೊಂಡು ಅಸ್ಥಿತ್ವಕ್ಕೆ ಬಂದವು ಅವುಗಳೆಂದರೆ

1) ಮಕ್ಕಳು ಮತ್ತು ಮೌಲ್ಯಯುತ ತರುಣರನ್ನ ಸಂಭವನೀಯ ದುಷ್ಪಚಟಗಳಿಂದ ಮತ್ತು ಅಸುರಕ್ಷಿತ ಮತ್ತು ಅನಪೇಕ್ಷಿತ ಮಾಧ್ಯಮ ವಿಷಯಗಳಿಂದ ರಕ್ಷಣೆ ಮಾಡುಲು ಮತ್ತು 2) ಜಾಗೃತ ಗ್ರಾಹಕರನ್ನ ಅಭಿವೃದ್ದಿಪಡಿಸಲು ಮತ್ತು ಉತ್ತೇಜಿಸಲು ವಿಶೇಷವಾಗಿ ಜವಾಬ್ದಾರಿಯುತ ಪಾಲಕರನ್ನ/ ಪಾಲಕತ್ವವನ್ನ ಪ್ರೇರಿಪಿಸುವುದು. ಅವುಗಳ ಪ್ರಕಾರ ಹಲವಾರು ನಿಯಮಗಳನ್ನ ಜಾರಿಗೆ ತಂದು ಅವುಗಳನ್ನ ಪಾಲಿಸುವಂತೆ ಮಾಡುವುದಾಗಿದೆ ಇಂತಹ ಮಂಡಳಿ ಗಳು ಪ್ರಮುಖವಾಗಿ ವಿಷಯ,ವಸ್ತು, ರೀತಿ, ಅಭಿವ್ಯಕಿ, ಪ್ರಬಾವ,ಉತ್ತೇಜನ, ಹಿಂಸೆ, ಲೈಂಗಿಕತೆ, ನಗ್ನತೆ, ಭಾಷೆ, ಬಂಗಿ, ವಸ್ತ್ರ, ಸಂಗೀತ, ಸಂಯೋಜನೆ ಮತ್ತು ಅವುಗಳ ಪರಿಣಾಮದ ಅಂದಾಜಿನ ಮೇಲೆ ಕೆಲವು ಸ್ಪಸ್ಟವಾದಂತಹ ನಿಯಮ ವನ್ನು ಮಾಡಿ ನಿಯಂತ್ರಣ ವನ್ನು ಮಾಡುತ್ತವೆ ಉದಾಹರಣೆಗೆ ನಾವು ನೋಡುತ್ತಿರುವಂತಹ ಕೆಲವು ಪ್ರಮಾಣ ಪತ್ರಗಳನ್ನ ನೀಡುತ್ತವೆ ಉದಾಹರಣೆಗೆ–ಎ,ಯು,ಎ/ಯು

ಭಾರತದಲ್ಲಿ ಈ ವಿಷಯ ಕುರಿತು IT Act of India ದ ಪ್ರಕಾರ "IT Act amendment in 2011 contains provision aimed at regulating cyber cafes" ಇದರ ಪ್ರಕಾರ ನೀಲಿ ಚಿತ್ರ ವನ್ನು ನೋಡುವುದು ತಪ್ಪಲ್ಲದ್ದಿದ್ದರೂ ಅದನ್ನು ಇನ್ನೊಬ್ಬ ರು ನೋಡುವಂತೆ ಮಾಡುವುದು (ನೀಲಿ ಚಿತ್ರ ಕಳುಹಿಸು ವುದು,ಪ್ರಕಟಿಸುವುದು ಇತ್ಯಾದಿಗಳು) ಶಿಕ್ಷಾರ್ಹ ಅಪರಾಧ, ಈ ಅಪರಾಧ ಕ್ಕೆ ಸುಮಾರು 7–ವರ್ಷ ಜೈಲು ಶಿಕ್ಷೆ ನೀಡಬಹುದು.

ಸೆಕ್ಷನ್ 67,67A and 67B of the Indian IT Act 2000 ಸಹ ನೀಲಿ ಚಿತ್ರಗಳನ್ನ ಪ್ರಕಟಿಸುವುದು,ಪ್ರಚಾರ ಪಡಿಸುವುದು,ಅಪರಾಧ ವಾಗಿದೆ.

Section 292 of the Indian penal code, 1860 ರ ಪ್ರಕಾರ "ಸಾರ್ವಜನಿಕ ವಲಯದಲ್ಲಿ ನೀಲಿಚಿತ್ರ ಸಂಬಂಧಿತ ವಿಷಯ, ವಸ್ತು, ಚಿತ್ರಗಳನ್ನು ಪ್ರದರ್ಶನದಂತಹ ಚಟುವಟಿಕೆ ಯಲ್ಲಿ ಭಾಗವಹಿಸುವದು

ಕಾನೂನು ರಿತ್ಯ ಭಾರತದಲ್ಲಿ ಅಪರಾಧವಾಗಿರುತ್ತದೆ.

ಇದಕ್ಕೆ ಪೂರಕ ಎನ್ನುವಂತೆ 2015 ರಲ್ಲಿ ಸುಮಾರು 857 ನೀಲಿಚಿತ್ರ ಸಂಬಂದಿತ ಸೈಟ್ ಗಳನ್ನು ಬ್ಯಾನ್ ಮಾಡಲಾಗಿದೆ ಮತ್ತು 18 ವರ್ಷ ಕ್ಕಿಂತ ಕಿರಿಯರು ಇಂತಹ ಸೈಟ್ ಗಳನ್ನು ಸಂದರ್ಶನ/ಸಂಪರ್ಕ ಮಾಡುವುದು ಅಪರಾಧ,

ಇದಕ್ಕೆ ಪೂರಕ ವಾಗಿ CBFC(Central Board of Film Chamber) ಸಹ ಮನೋರಂಜನೆಯ ಕ್ಷೇತ್ರದಲ್ಲಿನ ಇಂತಹ ವಿಷಯಯಗಳ ಕುರಿತು ನಿಯಂತ್ರಣ ಮತ್ತು ನಿರ್ವಹಣೆ ಯನ್ನು ನೋಡಿಕೊಳ್ಳುತ್ತದೆ,

ಈಗ ತಮಗೆಲ್ಲ ಈ ವಿಶಯದ ಗಂಬೀರತೆ ಆರ್ಥವಾಗಿರಬೇಕು ಅಂದುಕೊಳ್ಳುತ್ತೇನೆ ಹಾಗಂತ ಮಕ್ಕಳ ಮುಕ್ತ ಬೆಳವಣಿಗೆಗೆ ಮೂಬೈಲ್ ಆಗಲಿ, ಸಂವಾಹನ ಮಾದ್ಯಮವಾಗಲಿ, ಅಂತರ್ಜಾಲವಾಗಲಿ ಅಡ್ಡಿ ಎಂದು ನಾ ಹೇಳ ಹೊರಟಿಲ್ಲ ಮಕ್ಕಳೆಂದ ಮೇಲೆ ಮುಗ್ಧತೆಯು ಇರಬೇಕಲ್ಲವೆ? ಏಕಂದರೆ ಅವರು ನಮ್ಮ ಮಕ್ಕಳು ನಮ್ಮ ವಾರಸುದಾರರಲ್ಲವೆ? ಮೇಲಾಗಿ ನಮ್ಮ ಭವ್ಯ ಭಾರತದ ಬವಿತವ್ಯಕ್ಕೆ ಅವರೂ ಬದ್ದರಲ್ಲವೆ? ಮೇಲಾಗಿ ಭವಿಷ್ಯದ ಪ್ರಜ್ಞಾವಂತ ಆರೋಗ್ಯವಂತ ಪ್ರಜೆಗಳಾಗಬೇಕಲ್ಲವೆ? ಅಭಿವೃದ್ದಿ ಭಾರತದ ಜೊತೆ ಜೊತೆಗೆ ಆರೋಗ್ಯವಂತ ಭಾರತ ವನ್ನ ಕಟ್ಟುವುದೂ ನಮ್ಮ ಮೇಲಿರುವ ಮಹತ್ತರ ಜವಾಬ್ದಾರಿಯಲ್ಲವೆ? ಹಾಗಾಗಿ ಸರ್ಕಾರಗಳು ಇರುವ ಕಾನೂನು ಗಳನ್ನು ಇನ್ನುಷ್ಟು ಉನ್ನತಿಕರಿಸಿ ಪ್ರಸ್ತುತ ಸನ್ನಿವೇಶಕ್ಕೆ ಅನ್ವಯ ವಾಗುವಂತೆ ಮಾಡಬೇಕು, ಪಾಲಕರು ಸಹ ಅತಿ ತುರ್ಥಾಗಿ ಮಕ್ಕಳ ಚಟುವಟಿಕೆಗಳ ಮೇಲೆ ಒಂದು ಜವಾಬ್ದಾರಿಯುತ ಕಣ್ಣಿಡಬೇಕಾಗಿದೆ, ಏಕೆಂದರೆ ಮುಂದೊಂದು ದಿನ ವ್ಯಕ್ತಿಯೋರ್ವನ (ಅವನ/ಅವಳ) ವ್ಯಕ್ತಿತ್ವವನ್ನ ಅವರ ಅಂಗ ಮತ್ತು ಆಂಗಿಕತೆ,ಬಾವ/ಭಂಗಿ ಹಾಗು ಲೈಂಗಿಕ ಅಂಶಗಳ ಆದಾರದ ಮೇಲೆ ಅಳೆಯುವ ಕಾಲ ಸಮೀಪಿಸಿದಂತೆಯೇ! ಅಭಿರುಚಿ, ಆಸಕ್ತಿ ಅಯಾ ವಯಸ್ಸಿಗೆ ಸಹಜವಾಗಿರಲಿ ಆದರೆ ಅದೇ ವ್ಯಸನವಾ ಗದಿರಲಿ. ನೆನಪಿರಲಿ ಯಾವ ಕಾನೂನು ಬರಲಿ ಬರದಿರಲಿ ಮುಂದೊಂದು ದಿನ ನಮ್ಮ ಕರುಳ ಕುಡಿಗಳು ತಮಗರಿವಿಲ್ಲದಂತೆ ಇಂತಹ ಚಟಗಳಿಗೆ ಬಲಿಯಾಗಿ, ವ್ಯಸನಿಗಳಾಗಿ ನಮ್ಮ ಕುಡಿಗಳನ್ನ ನಮ್ಮದೇ ಕಣ್ಣಮುಂದೆ ಕೈಗೆ ಕೋಳ ತೊಡಿಸಿ ಇದೇ ಕಾನೂನು ಕರೆದುಕೊಂಡು ಹೋಗುವುದನ್ನ ನೋಡುವ ಸ್ಥಿತಿ ಯಾವ ಪಾಪಿ ಪಾಲಕನಿಗೂ ಬರದಿರಲಿ ಈ ಸತ್ಯವನ್ನು ಅರ್ಥೈಸಿಕೊಳ್ಳ ಲೇಬೇಕಾದ ಅನಿವಾರ್ಯ ನಮ್ಮ ನಿಮ್ಮಲ್ಲೆರ ಅತಿ ಮುಖ್ಯ ಜವಾಬ್ದಾರಿ, ಪಾಲಕರೆ ಎಚ್ಚರ!.

ಇ–ಆಫೀಸ್ ಅನುಷ್ಠಾನಕ್ಕೆ ಸೂಚನೆ

ಡಿಸಿ ನಲಿನ್ ಅತುಲ್ ಹೇಳಿಕೆ | ಹೋಬಳಿ ಮಟ್ಟದಲ್ಲಿಯೂ ಇ–ಆಫೀಸ್ ಅನುಷ್ಠಾನಕ್ಕೆ ಅಗತ್ಯ ಕ್ರಮವಹಿಸಿ

■ **ಹಂಪಿ ಟೈಮ್ಸ್ ಕೊಪ್ಪಳ**

ರಾಜ್ಯ ಸರ್ಕಾರದ ನಿರ್ದೇಶನದಂತೆ ಎಲ್ಲ ಕಂದಾಯ ಕಚೇರಿಗಳಲ್ಲಿ ಇ–ಆಫೀಸ್ ಅನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಲಾಗುತ್ತಿದ್ದು, ಅದರಂತೆ ಹೋಬಳಿ ಮಟ್ಟದಲ್ಲಿಯೂ ಇ–ಆಫೀಸ್ ಅನುಷ್ಠಾನಕ್ಕೆ ಅಗತ್ಯ ಕ್ರಮ ವಹಿಸುವಂತೆ ಜಿಲ್ಲಾಧಿಕಾರಿ ನಲಿನ್ ಅತುಲ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಮಂಗಳವಾರದಂದು(ಫೆ.20) ಗಂಗಾವತಿ ತಹಶೀಲ್ದಾರ ಕಚೇರಿಗೆ ಭೇಟಿ ನೀಡಿ, ಪರಿಶೀಲಿಸಿದ ನಂತರ ಅವರು ಅಧಿಕಾರಿ, ಸಿಬ್ಬಂದಿಗಳೊಂದಿಗೆ ಸಭೆ ನಡೆಸಿ ಮಾತನಾಡಿದರು.

ಕಡತ ವಿಲೇವಾರಿ ವಿಳಂಬ ತಪ್ಪಿಸುವ ಉದ್ದೇಶದಿಂದಾಗಿ ಕಂದಾಯ ಸಚಿವರು ಇ–ಆಫೀಸ್ ಮೂಲಕವೇ ಕಚೇರಿಯ ಎಲ್ಲ ಕಡತಗಳು ವಿಲೇವಾರಿ ಆಗಬೇಕು ಎಂದು ಸೂಚನೆ ನೀಡಿದ್ದಾರೆ. ಅದರಂತೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಎಲ್ಲ ಕಚೇರಿಗಳಲ್ಲಿ ಇ–ಆಫೀಸ್ ಅನುಷ್ಠಾನಗೊಳಿಸಲಾಗಿದ್ದು, ಹೋಬಳಿ ಮಟ್ಟದಲ್ಲಿಯೂ ಅನುಷ್ಠಾನಗೊಂಡಲ್ಲಿ ಕಚೇರಿ ಕೆಲಸಗಳಲ್ಲಿ ವೇಗದ ಪ್ರಗತಿಯನ್ನು ಕಾಣಬಹುದು.

ಇದರಿಂದ ಕೆಲಸದ ಒತ್ತಡವೂ ಕಡಿಮೆಯಾಗುತ್ತದೆ ಎಂದು ಅವರು ಹೇಳಿದರು.

ಜಿಲ್ಲಾಧಿಕಾರಿಗಳು ತಾಲ್ಲೂಕು ಕಚೇರಿಗಳಿಂದ ನಿರ್ವಹಿಸುವ ಕಲ್ಯಾಣ ಕರ್ನಾಟಕ ಮೀಸಲಾತಿ ಪ್ರಮಾಣ ಪತ್ರ 371(ಜೆ), ಆವಕ–ಜಾವಕ ವಿಭಾಗ, ಇಲಾಖಾ ದಾಖಲಾತಿ ಸಂಗ್ರಹಣಾ ಕೊಠಡಿ, ಮುಂತಾದ ಸಂಕಲನ ವಿಭಾಗಳಿಗೆ ಖುದ್ದು ಭೇಟಿ ನೀಡಿ, ಪರಿಶೀಲಿಸಿದರು. ದಾಖಲಾತಿಗಳನ್ನು ಸುಸ್ಥಿತಿಯಲ್ಲಿ ಇಟ್ಟುಕೊಂಡು, ಜವಾಬ್ದಾರಿ ಹಾಗೂ ಎಚ್ಚರಿಕೆಯಿಂದ ಕಾರ್ಯನಿರ್ವಹ

ನಮ್ಮನ್ನು ಕಡೆಗಣಿಸಿದ ಸರ್ಕಾರಕ್ಕೆ ತಕ್ಕಪಾಠ

ಶ್ರೀಗುರು ಸರ್ದಾರ್ ಸೇವಾಲಾಲ್ ಮಹಾಸ್ವಾಮೀಜಿ ಆಕ್ರೋಶ । ರಾಜ್ಯದಲ್ಲಿ 40 ಲಕ್ಷಕ್ಕೂ ಅಧಿಕ ಬಂಜಾರ್ ಜನಸಂಖ್ಯೆ । ಬಂಜಾರ್ ನಿಗಮಕ್ಕೆ 500 ಕೋಟಿ ರೂ ನಿಡಲು ಆಗ್ರಹ

ಸಮುದಾಯದ ಅಭಿವೃದ್ಧಿ ಹಣ ಗ್ಯಾರಂಟಿಗೆ ಬಳಸಿದರೆ ಖಂಡನೆ । ಸಿಎಂ ಜೊತೆ ಭೀಮಾನಾಯ್ಕ ಇದ್ದರೂ ಬಂಜಾರ ಸಮಾಜ ಕಡೆಗಣಿಸಿರುವುದು ವಿಪರ್ಯಾಸ ಎಂದ ಶ್ರೀಗಳು

■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ

ಈ ಬಾರಿಯ ರಾಜ್ಯ ಸರ್ಕಾರದ ಬಜೆಟ್‌ನಲ್ಲಿ ನಮ್ಮ ಸಮುದಾಯವನ್ನು ಸಂಪೂರ್ಣ ನಿರ್ಲಕ್ಷ್ಯ ವಹಿಸಲಾಗಿದೆ ಎಂದು ಬಂಜಾರ್ ಸಮುದಾಯದ ಚಿತ್ರದುರ್ಗದ ಶ್ರೀಗುರು ಸರ್ದಾರ್ ಸೇವಾಲಾಲ್ ಮಹಾಸ್ವಾಮೀಜಿ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಬೇಸರ ವ್ಯಕ್ತಪಡಿಸಿದರು.

ಪಟ್ಟಣದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಕರ್ನಾಟಕ ರಾಜ್ಯದಲ್ಲಿ ಬಂಜಾರ್ ಸಮುದಾಯ 40 ಲಕ್ಷಕ್ಕೂ ಹೆಚ್ಚು ಜನಸಂಖ್ಯೆಯನ್ನು ಹೊಂದಿದೆ, ಸಮುದಾಯದವರಿಗೆ ತಮ್ಮದೇ ಆದ ಕಲೆ, ಸಂಸ್ಕೃತಿ, ಗುರುಪರಂಪರೆ ಸೇರಿದಂತೆ ಸಮಾಜದ ಎಲ್ಲಾ ಸಮುದಾಯಗಳೊಂದಿಗೆ ಹೊಂದಿಕೊಂಡು ಹೋಗುವ ಸಮುದಾಯವಾಗಿದ್ದು, ಸಮುದಾಯದ ಅಭಿವೃದ್ಧಿಗಾಗಿ ಮನ್ನಣೆ ನೀಡದೆ ರಾಜ್ಯ ಬಜೆಟ್‌ನಲ್ಲಿ ಯಾವುದೇ ಹಣ ಮೀಸಲಿರಿಸಿಲ್ಲ. ಬಂಜಾರ್ ನಿಗಮಕ್ಕೂ ಆದ್ಯತೆ ನೀಡಿಲ್ಲ. ಆದ್ದರಿಂದ ನಿಗಮಕ್ಕೆ 500 ಕೋಟಿ ರೂ.ಗಳನ್ನು ಮೀಸಲಿರಿಸಬೇಕು. ಸಮುದಾಯದ ಅಭಿವೃದ್ಧಿಗಾಗಿ ಬಂದ ಹಣವನ್ನು ರಾಜ್ಯ ಸರ್ಕಾರ ಗ್ಯಾರಂಟಿಗಾಗಿ ಬಳಸಿಕೊಳ್ಳಲಾಗಿದೆ ಎಂದು ಹೇಳಲಾಗುತ್ತಿದೆ. ಇನ್ನು

ನಾವು ಖಂಡಿಸುತ್ತೇವೆ ಎಂದರು.

ಸ್ಪೀಕರ್ ರುದ್ರಪ್ಪ ಲಮಾಣಿ ನೇತೃತ್ವದಲ್ಲಿ ಜರುಗಿದ ಸಂತ ಸೇವಾಲಾಲ್ ಜಯಂತಿಯಲ್ಲಿ ಲಕ್ಷ-ಲಕ್ಷ ಜನರು ಪಾಲ್ಗೊಂಡಿರುತ್ತಾರೆ. ಆ ಕಾರ್ಯಕ್ರಮಕ್ಕೆ ರಾಜ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆಗಮಿಸಬೇಕಿತ್ತು. ರಾಜ್ಯ ಸರ್ಕಾರ ಅಲ್ಲಿ ಪಾಲ್ಗೊಳ್ಳದಿರುವುದು ಮತ್ತಷ್ಟು ಬೇಸರ ಮೂಡಿಸಿದೆ ಎಂದರು. ಹಿಂದುಳಿದ, ದೀನ, ದಲಿತರ ನಾಯಕ ರಾಜ್ಯದ ಮುಖ್ಯಮಂತ್ರಿಯಾಗಿದ್ದಾರೆ ಎನ್ನುವುದು ಸಂತಸವಾಗಿತ್ತು. ಸಮುದಾಯವನ್ನು ಕಡೆಗಾಣಿಸಿರುವುದು ಹಾಗೂ ಕಾರ್ಯಕ್ರಮಕ್ಕೆ ರಾಜ್ಯ ಸರ್ಕಾರ ಬಾರದಿರುವುದು ಸಮುದಾಯವನ್ನು ಸಂಪೂರ್ಣ ಕಡೆಗಾಣಿಸಿದೆ ಎಂದು ಕಿಡಿಕಾರಿದರು. ಈ ವಿಚಾರದಲ್ಲಿ ರಾಜ್ಯ ಹಾಲು ಉತ್ಪಾದಕರ ಮಹಾಮಂಡಳಿಯ ರಾಜ್ಯಾಧ್ಯಕ್ಷ ಎಸ್.ಭೀಮಾನಾಯ್ಕ್ ಮುಖ್ಯಮಂತ್ರಿಗಳ ಪಕ್ಕದಲ್ಲಿಯೇ ಇದ್ದರೂ ನಮ್ಮ ಸಮುದಾಯವನ್ನು ಕಡೆಗಣಿಸಿರುವುದು ವಿಪರ್ಯಾಸವೆಂದರು. ಇದೇ ಮುಂದುವರೆದರೆ ಮುಂದೆ ನಾವು ಬೇರೆ ರೀತಿ ಕ್ರಮ ಕೈಗೊಳ್ಳಬೇಕಾಗುತ್ತೆ ಎಂದು ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಈ ವೇಳೆ ಬಂಜಾರ್ ಸಮುದಾಯದ ತಾಲೂಕು ಅಧ್ಯಕ್ಷ ಸುಭಾಷ್‌ನಾಯ್ಕ್, ಲಕ್ಯನಾಯ್ಕ್, ಪೀರ್ಯಾನಾಯ್ಕ್, ವಿಜಯಕುಮಾರ್, ದ್ಯೇನ್ಯನಾಯ್ಕ್, ಭಂಗ್ಯನಾಯ್ಕ್ ಹಾಗೂ ಯಮನೂರ್‌ನಾಯ್ಕ್ ಇತರರಿದ್ದರು.

ಮತಾಂತರಿಗಳಿಗೆ ಎಚ್ಚರಿಕೆ

ಮತಾಂತರ ಹುನ್ನಾರ ವಿರುದ್ಧ ಕೆರಡೆಕಾರಿದ ಸ್ವಾಮೀಜಿ ರಾಜ್ಯದಲ್ಲಿ ಈಗಾಗಲೇ ಕ್ರೈಸ್ತ ಮಿಷನರಿಗಳು ತಾಂಡಗಳಿಗೆ ಲಗ್ಗೆ ಇಟ್ಟು, ಆಮಿಷಗಳನ್ನು ಹೊಡ್ಡಿ, ಬಂಜಾರ್ ಸಮುದಾಯದವರನ್ನು ಮತಾಂತರ ಮಾಡುವ ಹುನ್ನಾರ ನಡೆದಿದೆ ಎಂದು ಸರ್ದಾರ್ ಸೇವಲಾಲ್ ಮಹಾಸ್ವಾಮೀಜಿ ಆರೋಪಿಸಿದರಲ್ಲದೆ, ಮತಾಂತರಿಗಳ ವಿರುದ್ಧ ಕೆಂಡಕಾರಿದರು. ಯಾವುದೇ ಆಮಿಷಗಳಿಗೆ ಒಳಗಾಗದಿರಿ. ಒಂದು ವೇಳೆ ನೀವು ಹೋಗಿದ್ದರೆ, ಇಲ್ಲಿಯ ಎಸ್.ಸಿ.ಮೀಸಲಾತಿಗಳನ್ನು ತ್ಯಜಿಸಿ ಹೋಗತಕ್ಕದ್ದು ಎಂದು ತಾಖೀತು ಮಾಡಿದರು. ಮುಂದಿನ ದಿನದಲ್ಲಿ ರಾಜ್ಯದ ಎಲ್ಲಾ ತಾಂಡಗಳಲ್ಲಿ ಜನಜಾಗೃತಿ ಕೈಗೊಳ್ಳಲಾಗುವುದು ಎಂದರು.

ಒಳ ಮೀಸಲಾತಿಗೆ ಶಿಫಾರಸ್ ವಿರುದ್ಧ ಕಿಡಿ

ರಾಜ್ಯದಲ್ಲಿ ಪರಿಶಿಷ್ಟಜಾತಿ ಮೀಸಲಾತಿಯಲ್ಲಿ ಒಳ ಮೀಸಲಾತಿಗಾಗಿ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಶಿಫಾರಸ್ ಮಾಡಬಾರದು, ಮಾಡಿದ್ದರೆ ಅದನ್ನು ಹಿಂಪಡೆಯಬೇಕು ಎಂದು ಸರ್ದಾರ ಸೇವಾಲಾಲ್ ಮಹಾಸ್ವಾಮಿಗಳು ಒತ್ತಾಯಿಸಿದರು. ಜನಸಂಖ್ಯೆ ಹಾಗೂ ಸಮುದಾಯದ ಸಂಪೂರ್ಣ ಚಿತ್ರಣ ಪಡೆದು ಈ ನಿರ್ಧಾರ ತೆಗೆದುಕೊಳ್ಳಲಿ. ಕಡುಬಡತನದಲ್ಲಿರುವ ಸಮುದಾಯ ಕೂಲಿನಾಲಿಗಾಗಿ ಹೈ.ಕರ್ನಾಟಕ ವ್ಯಾಪ್ತಿಯಲ್ಲಿ ಇಂದಿಗೂ ಗುಳೆಹೋಗುವುದು ತಪ್ಪಿಲ್ಲ ಎಂದರು.

20ನೇ ವರ್ಷದ ಜಾತ್ರಾಮಹೋತ್ಸವಕ್ಕೆ ಬನ್ನಿ

ತಾಲೂಕಿನ ಕೋಗಳಿ ತಾಂಡದಲ್ಲಿ ಲಿಂ.ಗುರುಗೋಪಾಲ ಸ್ವಾಮೀಜಿಯವರಿಂದ ಸ್ಥಾಪಿತವಾದ ಶಾಂತಿಧಾಮ ಸೇವಾ ಟ್ರಸ್ಟ್‌ನಿಂದ ಜರುಗುವ ಧಾರ್ಮಿಕ ಕಾರ್ಯಕ್ರಮಗಳು ಹಾಗೂ 20ನೇ ವರ್ಷದ ಶ್ರೀಅಜ್ಜಮ್ಮ ದೇವಿ ಜಾತ್ರಾ ಮಹೋತ್ಸವ ಮತ್ತು ಫೆ.23ರ ಶುಕ್ರವಾರ ಸಂಜೆ 5ಗಂಟೆಗೆ ರಥೋತ್ಸವ ಮತ್ತು ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಜಾತ್ರಾ ಮಹೋತ್ಸವಕ್ಕೆ ಶಾಸಕ ಕೆ.ನೇಮಿರಾಜ್ ನಾಯ್ಕ್ ಸೇರಿದಂತೆ ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆ .

– ಸರ್ದಾರ್ ಸೇವಾಲಾಲ್ ಸ್ವಾಮೀಜಿ

ಮೈಕ್ರೋ ನ್ಯೂಸ್

ಕರಾಮುವಿಯಿಂದ ಪಿಯು-ಸಿಇಟಿ,ನೀಟ್ ಪರೀಕ್ಷೆಗಆಗೆ ತರಬೇತಿ: ನೋಂದಣಿಗೆ ಆಹ್ವಾನ

ಹಂಪಿ ಟೈಮ್ಸ್ ಬಳ್ಳಾರಿ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಮೈಸೂರಿನ ವಿಜಯ ವಿಠ್ಠಲ ಶಿಕ್ಷಣ ಸಂಸ್ಥೆ ಸಹಯೋಗದಲ್ಲಿ ಪಿಯುಸಿ ನಂತರದ ವೃತ್ತಿಪರ ಉನ್ನತ ಶಿಕ್ಷಣಕ್ಕಾಗಿ ಸಾಮಾನ್ಯ ಪ್ರವೇಶ ಪರೀಕ್ಷೆಗೆ (ಕೆ-ಸಿಇಟಿ ಮತ್ತು ನೀಟ್) 30 ದಿನಗಳ ತರಬೇತಿಯನ್ನು ಮೈಸೂರಿನ ಕೇಂದ್ರ ಕಚೇರಿಯಲ್ಲಿ ನಡೆಸಲು ನಿರ್ಧರಿಸಲಾಗಿದ್ದು, ಆಸಕ್ತರು ತರಬೇತಿಗೆ ನೋಂದಾಯಿಸಿಕೊಳ್ಳಬಹುದು.

ಆಸಕ್ತ ವಿದ್ಯಾರ್ಥಿಗಳು ಮತ್ತು ಪೋಷಕರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಕರಾಮುವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ಕಚೇರಿಯಲ್ಲಿ ಫೆ.27 ರೊಳಗಾಗಿ ಬೆಳಿಗ್ಗೆ 10 ಗಂಟೆಯಿಂದ ಸಂಜೆ 4.30 ಗಂಟೆಯವರೆಗೆ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬಹುದು ಅಥವಾ ಮಾಹಿತಿಗಾಗಿ ದೂ.0821-2515944 ಗೆ ಸಂಪರ್ಕಿಸಬಹುದು ಎಂದು ಕರಾಮುವಿ ಕುಲಸಚಿವ ಪ್ರೊ.ಕೆ.ಎಲ್.ಎನ್ ಮೂರ್ತಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಫೆ.22ಕ್ಕೆ ಶಿವಗಂಗಾ ಆರತಿ ವಿಶೇಷ ಪೂಜಾ ಕಾರ್ಯಕ್ರಮ; ಸಾರ್ವಜನಿಕರು ಪಾಲ್ಗೊಳ್ಳಲು ಮನವಿ

ಹಂಪಿ ಟೈಮ್ಸ್ ಬಳ್ಳಾರಿ

ನಗರದ ಶ್ರೀ ಕೋಟೆ ಮಲ್ಲೇಶ್ವರ ಸ್ವಾಮಿಯ ಉತ್ಸವವು ಮಾ.09 ರ ವರೆಗೆ ಜರಗುತ್ತಿದ್ದು, ಫೆ.24 ರಂದು ಬ್ರಹ್ಮರಥೋತ್ಸವು ನಡೆಯಲಿದೆ. ಇದರ ಅಂಗವಾಗಿ ಫೆ.22 ರಂದು ಶ್ರೀ ಕೋಟೆ ಮಲ್ಲೇಶ್ವರ ಸ್ವಾಮಿ ಮತ್ತು ಪಾರ್ವತಿ ದೇವಿಯ ಕಲ್ಯಾಣೋತ್ಸವ ಹಾಗೂ ವಿಶೇಷವಾಗಿ ಮೊದಲ ಬಾರಿಗೆ ಶಿವಗಂಗಾ ಆರತಿ ವಿಶೇಷ ಪೂಜಾ ಕೈಂಕರ್ಯಗಳ ಕಾರ್ಯಕ್ರಮವು ಸಂಜೆ 7 ಗಂಟೆಗೆ ನಡೆಯಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾಧಿಗಳು, ಸಾರ್ವಜನಿಕರು ಭಾಗವಹಿಸಿ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕು.

ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು, ಮಹಾನಗರಪಾಲಿಕೆಯ ಮಹಾಪೌರರು ಮತ್ತು ಚುನಾಯಿತ ಪ್ರತಿನಿಧಿಗಳು ಹಾಗೂ ಎಲ್ಲಾ ಜಿಲ್ಲಾಮಟ್ಟದ ಅಧಿಕಾರಿಗಳು ಭಾಗವಹಿಸುವರು ಎಂದು ಶ್ರೀ ಮಲ್ಲೇಶ್ವರ ಸ್ವಾಮಿ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಹನುಮಂತಪ್ಪ ತಿಳಿಸಿದ್ದಾರೆ.

ಯುವಕ ವೃಂದ'ದ ೩೦ ಅಭ್ಯರ್ಥಿಗಳನ್ನು ಗೆಲ್ಲಿಸಿ :ರಾಮನಗೌಡ

ಹಂಪಿ ಟೈಮ್ಸ್ ಬಳ್ಳಾರಿ

ವೀರಶೈವ ವಿದ್ಯಾವರ್ಧಕ ಸಂಘದ ನೂತನ ಕಾರ್ಯಕಾರಿ ಸಮಿತಿ ಚುನಾವಣೆಯಲ್ಲಿ 'ಯುವಕ ವೃಂದ'ದ ಎಲ್ಲಾ 30 ಅಭ್ಯರ್ಥಿಗಳಿಗೆ ಮತ ನೀಡಿ ಸ್ಪಷ್ಟ ಬಹುಮತ ನೀಡಬೇಕು ಎಂದು ವೀರಶೈವ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಆರ್. ರಾಮನಗೌಡ ಅವರು ಮನವಿ ಮಾಡಿದರು.

ಶ್ರೀ ಸನಾತನ ವೀರಶೈವ ಗುರುಕುಲ ಮಠ (ಶ್ರೀ ಪೊಂಪಯ್ಯಸ್ವಾಮಿಗಳ ಛತ್ರ)ದಲ್ಲಿ ಬುಧವಾರ ನಡೆದ 'ಯುವಕವೃಂದ'ದ ಸಭೆಯಲ್ಲಿ ಮಾತನಾಡಿದರು.

ಅಭ್ಯರ್ಥಿ ಡಾ. ಭಾಗ್ಯಲಕ್ಷ್ಮಿ ಅವರು, ಆಜೀವ ಸದಸ್ಯ ಮತದಾರರು 'ಯುವಕ ವೃಂದ'ದ ಎಲ್ಲಾ ಅಭ್ಯರ್ಥಿಗಳಿಗೆ ಮತ ನೀಡಿ, ಎಲ್ಲಾ 30 ಅಭ್ಯರ್ಥಿಗಳನ್ನು ಗೆಲ್ಲಿಸಿ ಉತ್ತಮ, ಪಾರದರ್ಶಕ ಹಾಗೂ ಗುಣಮಟ್ಟದ ಶಿಕ್ಷಣಕ್ಕಾಗಿ ಒಟ್ಟಾಗಿ ಕೆಲಸ ಮಾಡಲು ಆಶೀರ್ವಾದ ಮಾಡಿರಿ ಎಂದು ಮನವಿ ಮಾಡಿದರು.

ಅಭ್ಯರ್ಥಿ ಡಾ. ಕೆ. ಮಹಾಂತೇಶ್ ಅವರು, ಹಾಲಿ ಅಧ್ಯಕ್ಷ ಆರ್. ರಾಮನಗೌಡರ ನೇತೃತ್ವದಲ್ಲಿ ಸಂಘದ ಕೋಟ್ಯಾಂತರ ರೂಪಾಯಿ ಮೌಲ್ಯದ 14 ಎಕರೆ ಭೂಮಿಯನ್ನು ಸಂಪೂರ್ಣವಾಗಿ ಸಂಘದ ಸ್ವಾಧೀನಕ್ಕೆ ಪಡೆಯುವಲ್ಲಿ ಯಶಸ್ವಿಯಾಗಿದ್ದೇವೆ. ಸಂಸ್ಥೆಯನ್ನು ಆರ್ಥಿಕವಾಗಿ ಸದೃಢಗೊಳಿಸುವ ಮೂಲಕ ಸಂಸ್ಥೆಯಲ್ಲಿ ಆರ್ಥಿಕ ಶಿಸ್ತು ಮತ್ತು ಶೈಕ್ಷಣಿಕ ಸುಧಾರಣೆಗಾಗಿ ಪ್ರಯತ್ನ ಮಾಡುತ್ತೇವೆ. ಕಾರಣ ಆಜೀವ ಸದಸ್ಯರು 'ಯುವಕ ವೃಂದ'ಕ್ಕೆ ಸ್ಪಷ್ಟ ಬಹುಮತ ನೀಡಬೇಕು ಎಂದು ಕೋರಿದರು.

ಜ್ಞಾನ ಕರಗದ ಸಂಪತ್ತು

ಜಿಪಂ ಸಿಇಒ ಸದಾಶಿವ ಪ್ರಭು ಹೇಳಿಕೆ । ಹಳೆಮಲಪನಗುಡಿಯಲ್ಲಿ ಮಕ್ಕಳ ಸಾಹಿತ್ಯ ಸಂಭ್ರಕ್ಕೆ ಚಾಲನೆ

ಮಕ್ಕಳಲ್ಲಿ ಕಲಿಕಾ ಉತ್ಸಾಹ ಹೆಚ್ಚಳಕ್ಕೆ 6 ಆಡಿ ಪುಸ್ತಕದ ಮಾದರಿ ಬಂಡಿಯಲ್ಲಿಟ್ಟು ಮೆರವಣಿಗೆ

■ ಹಂಪಿ ಟೈಮ್ಸ್ ಹೊಸಪೇಟೆ:

ಮೊಬೈಲ್ ಗೀಳು ಜಾಸ್ತಿ ಆಗುತ್ತಿರುವ ಇಂದಿನ ಕಾಲದಲ್ಲಿ ಮಕ್ಕಳ ಸೃಜನಶೀಲತೆಗೆ ಸಾಹಿತ್ಯ ಸಂಭ್ರಮ ಸಹಕಾರಿಯಾಗಲಿದೆ. ಓದಿಗೆ ಯಾವುದೇ ಪರ್ಯಾಯವಿಲ್ಲ. ನಾವು ಜೀವನದಲ್ಲಿ ಏನಾದರೂ ಸಾಧಿಸಬೇಕಾದರೆ ಓದು ಅತೀ ಮುಖ್ಯ ಎಂದು ಜಿಪಂ ಸಿಇಒ ಸದಾಶಿವ ಪ್ರಭು ಹೇಳಿದರು.

ತಾಲೂಕಿನ ಹಳೇ ಮಲಪನಗುಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬುಧವಾರ ಹಮ್ಮಿಕೊಂಡಿದ್ದ ಮಕ್ಕಳ ಸಾಹಿತ್ಯ ಸಂಭ್ರಭ ಉದ್ಘಾಟಿಸಿ ಮಾತನಾಡಿದರು. ಓದು ಬರವಣಿಗೆ ಮಕ್ಕಳಲ್ಲಿ ಮೂಡಿಸಲು ಮಕ್ಕಳ ಸಾಹಿತ್ಯ ಸಂಭ್ರಮ ಅನುಕೂಲಕರವಾಗಿದೆ. ಕಥೆ ಕಟ್ಟೋಣ, ಕವಿತೆ ಕಟ್ಟೋಣ, ನಾನು ರಿಪೋರ್ಟರ್, ನಾಟಕ ಮಾಡೋಣ ಎಂಬ ನಾಲ್ಕು ಕಾರ್ನರ್ ಗಳನ್ನು ರೂಪಿಸಿರುವುದು ಮಕ್ಕಳಲ್ಲಿನ ಸಾಹಿತ್ಯದ ಅರಿವು ಹೆಚ್ಚಳಕ್ಕೆ ಸಹಕಾರಿಯಾಗಲಿವೆ. ನಿರಂತರ ಓದು, ಬರವಣಿಗೆಗಳು ವ್ಯಕ್ತಿಯನ್ನು ಉನ್ನತಕ್ಕೇರಿಸುತ್ತವೆ. ಜ್ಞಾನದ ಸಂಪತ್ತು ಎಲ್ಲ ಸಂಪತ್ತಿಕ್ಕಿಂತಲೂ ಮಿಗಿಲಾದ್ದದ್ದು ಎನ್ನುವುದನ್ನು ಅರಿತುಕೊಳ್ಳಬೇಕು ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಎಂ. ಚೆನ್ನಬಸಪ್ಪ ಮಾತನಾಡಿ, ಸಾಹಿತ್ಯ ಸಂಭ್ರಮದ ಚಟುವಟಿಕೆಗಳು ಸರ್ಕಾರಿ ಶಾಲೆಯ ಮಕ್ಕಳಿಗೆ ಹೊಸ ದಾರಿ ತೋರಲಿವೆ ಎಂದರು.

ಭಾರತ ಜ್ಞಾನ ವಿಜ್ಞಾನ ಸಮಿತಿಯ ರಾಜ್ಯ ಉಪಾಧ್ಯಕ್ಷರಾದ ಹೆಚ್.ಸೌಭಾಗ್ಯಲಕ್ಷ್ಮಿ ಮಾತನಾಡಿ, ಮಕ್ಕಳ ಸಾಹಿತ್ಯ ಸಂಭ್ರಮದ ಯೋಜನೆಯ ರೂಪಿಸಲು ಆರು ತಿಂಗಳಿನಿಂದ ಶ್ರಮಪಡಲಾಗಿದೆ. ರಾಜ್ಯದ ವಿವಿಧ ಸಂಪನ್ಮೂಲ ವ್ಯಕ್ತಿಗಳು ಮಕ್ಕಳ ಸಾಹಿತ್ಯ ಸಂಭ್ರಮಕ್ಕೆ ಬೇಕಾದಂತಹ ಕೈಪಿಡಿಯನ್ನು ತಯಾರಿಸಿದ್ದಾರೆ. ಮಕ್ಕಳು ಸುಲಭ ರೀತಿಯಲ್ಲಿ ಸಾಹಿತ್ಯ ರಚಿಸುವಂತೆ ಅನೇಕ ಚಟುವಟಿಕೆಗಳನ್ನು ಇದರಲ್ಲಿ ರೂಪಿಸಲಾಗಿದೆ. ಮಕ್ಕಳ ಅಭಿವ್ಯಕ್ತಿಯ ಕ್ರಮವನ್ನು ಚಟುವಟಿಕೆಗಳ ಮೂಲಕ ಅನಾವರಣ ಗೊಳಿಸುವುದೆ ಇದರ ಉದ್ದೇಶವಾಗಿದೆ ಎಂದರು.

ತಾಪಂ ಇಒ ಎಂ ಉಮೇಶ್ ಮಾತನಾಡಿದರು. ರಾಜ್ಯೋತ್ಸವ ಪ್ರಶಸ್ತಿ ವಿಜೇತರಾದ ಕಾರಾ ಮಂಚಪ್ಪ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮಕ್ಕೂ ಮೊದಲು, 6 ಆಡಿ ಪುಸ್ತಕದ ಮಾದರಿಯನ್ನು ಬಂಡಿಯಲ್ಲಿಟ್ಟು, ಊರಿನಲ್ಲಿ ಪ್ರದರ್ಶನ ಮಾಡಲಾಯಿತು. ಅಧಿಕಾರಿಗಳು ಮತ್ತು ಮಕ್ಕಳು ಕೋಲಾಟ ಆಡುತ್ತಾ, ಹಾಡುತ್ತಾ ಕುಣಿಯುತ್ತ ಮೆರವಣಿಗೆಯಲ್ಲಿ ಪಾಲ್ಗೊಂಡರು. ಮಲಪನನ ಗುಡಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಚಂದ್ರಕಲಾ, ಹಂಪಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ರಜನಿ, ಎಸ್. ಡಿ ಎಂ.ಸಿ ಅಧ್ಯಕ್ಷರಾದ ನಾಗರಾಜ್, ಎಂ ರಮೇಶ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಉಪಾಧ್ಯಕ್ಷರಾದ ಸುಧಾದೇವಿ, ಗುರುಬಸವರಾಜ, ಸರ್ಕಾರಿ ನೌಕರರ ಸಂಘದ ಜಿಲ್ಲಾ ಕಾರ್ಯದರ್ಶಿಗಳಾದ ಕಡ್ಲಿ ವೀರಭದ್ರೇಶ, ಪ್ರೌಢಶಾಲಾ ಬಡ್ತಿ ಮುಖ್ಯಗುರುಗಳ ಸಂಘದ ಅಧ್ಯಕ್ಷರಾದ ಅಕ್ಕಮಹಾದೇವಿ, ವಿಜಯನಗರ ಜಿಲ್ಲಾ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಕಾರ್ಯದರ್ಶಿ ಶೇಖರ್ ಗಿರಡ್ಡಿ, ಮಕ್ಕಳ ಸಾಹಿತ್ಯ ಸಂಭ್ರಮದ ನೋಡಲ್ ಅಧಿಕಾರಿಗಳಾದ ಕಾವ್ಯಶ್ರೀ, ಮಧ್ಯಾಹ್ನ ಬಿಸಿ ಊಟದ ನಿರ್ದೇಶಕರಾದ ಸುಧಾಕರ್, ಮೂರು ಪಂಚಾಯತಿಗಳ ಪಿ.ಡಿ.ಓ. ಗಳು, ಸಿ. ಆರ್. ಪಿ.ಗಳು, ಭಾರತ ಜ್ಞಾನ ವಿಜ್ಞಾನ ಸಮಿತಿಯ ಕಾರ್ಯದರ್ಶಿಗಳಾದ ಡಾ.ಟಿ .ಎಂ. ಉಷಾರಾಣಿ ಉಪಸ್ಥಿತರಿದ್ದರು. ವಿದ್ಯಾವತಿ ಮತ್ತು ಕೆ. ಶಾಂತಲಾ ಕಾರ್ಯಕ್ರಮ ನಿರ್ವಹಣೆ ಮಾಡಿದರು. ಪ್ರಭಾರಿ ಮುಖ್ಯ ಗುರುಗಳಾದ ಟಿ.ವಿಶ್ವನಾಥ್ ನಿರ್ವಹಿಸಿದರು.

ಸಂಡೂರಿನಲ್ಲಿ ಸಂವಿಧಾನ ಜಾಗೃತಿ ಜಾಥಾ ಸಂಚಾರ

■ ಹಂಪಿ ಟೈಮ್ಸ್ ಸಂಡೂರು

ಸಂವಿಧಾನ ಜಾಗೃತಿ ಜಾಥಾವು ಬುಧವಾರದಂದು ಸಂಡೂರು ಪಟ್ಟಣದ ವಿವಿಧ ವಾರ್ಡ್‌ಗಳಲ್ಲಿ ಸಂಚರಿಸಿತು.

ಸಂಡೂರು ಪಟ್ಟಣಕ್ಕೆ ಆಗಮಿಸಿದ ಜಾಥಾವನ್ನು ಕಳಶ ಹಿಡಿದ ಮತ್ತು ಪೂರ್ಣ ಕುಂಭ ಹೊತ್ತ ಮಹಿಳೆಯರು, ಹಲಗೆ ಮತ್ತು ಡೊಳ್ಳು ಕಲಾವಿದರು, ಕಂಸಾಳೆ, ನಂದಿ ಕೋಲು ಕುಣಿತದ ಕಲಾವಿದರು, ವೀರಗಾಸೆ ಕಲಾ ಪ್ರದರ್ಶನ, ಶಾಲಾ ಶಿಕ್ಷಕರು ಮತ್ತು ವಿದ್ಯಾರ್ಥಿಗಳು, ಜನಪ್ರತಿನಿಧಿಗಳು, ಪಟ್ಟಣದ ಮುಖಂಡರು ಹಾಗೂ ಸಾರ್ವಜನಿಕರು ಅದ್ದೂರಿಯಾಗಿ ಬರ ಮಾಡಿಕೊಂಡರು.

ಜಾಥಾದಲ್ಲಿ ಸಂವಿಧಾನದ ಆಶಯ ಮತ್ತು ಮೌಲ್ಯಗಳನ್ನು ಕುರಿತು ಸಾರ್ವಜನಿಕರಲ್ಲಿ ಜಾಗೃತಿಯನ್ನು ಮೂಡಿಸಲಾಯಿತು. ಸಂವಿಧಾನ ರಚನಾ ಸಭೆ ಹಾಗೂ ಸಂವಿಧಾನದ ಕುರಿತ ವೀಡಿಯೋ

ತುಣುಕುಗಳನ್ನು ಸಾರ್ವಜನಿಕರಿಗೆ ಪ್ರದರ್ಶಿಸಲಾಯಿತು.

ಸಂವಿಧಾನ ಪ್ರಸ್ತಾವನೆಯ ಪ್ರತಿಜ್ಞಾ ವಿಧಿಯನ್ನು ಸ್ವೀಕರಿಸಿ, ಜಾಥಾದ ಉದ್ದಕ್ಕೂ ಸಂವಿಧಾನ ಪ್ರಸ್ತಾವನೆಯ ಪ್ರತಿಗಳನ್ನು ಹಂಚಿಕೆ ಮಾಡಲಾಯಿತು.

ಜಾಥಾವು ತಾಲ್ಲೂಕು ಕಚೇರಿಯಿಂದ ಹೊರಟು, ವಿಜಯಾ ಸರ್ಕಲ್‌ನ ಸ್